**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ.ಉಪಲೋಕ್–1/ಇ.ವಿ./677/2016/ಅನಿವಿ–9

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು–560 001
ದಿನಾಂಕ :30.5.2022

**:ವಿಚಾರಣಾ ವರದಿ:**

**:ಉಪಸ್ಥಿತರು:**
**(ಗೋಪಾಲಪ್ಪ ಎಸ್)**
**ಅಪರ ನಿಬಂಧಕರು ವಿಚಾರಣೆಗಳು–9**
**ಕರ್ನಾಟಕ ಲೋಕಾಯುಕ್ತ,**
**ಬೆಂಗಳೂರು**

ವಿಷಯ: ಆ.ಸ.ನೌಕರರಾದ (1) ಶ್ರೀ.ಗುರಗುಂಟೆ ಶಿವಶಂಕರಪ್ಪ, ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ, ಬೀದರ, (2) ಶ್ರೀ.ಮನೋಹರ್ ಮಂಡೊಳ್ಳಿ, ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ, ಬೀದರ, (3) ಶ್ರೀ.ಮಲ್ಲಿಕಾರ್ಜುನ ಕರೋಜಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಹೆಚ್.ಬಿ, ಆಡಳಿತ ಭವನ, ಬಾಗಲಕೋಟೆ, **(4) ಶ್ರೀ.ಅಮ್ಮಣ್ಣ ಶಂಕರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ವಿಭಾಗ, ಬೀದರ್ (ಹಾಲಿ ನಿವೃತ್ತ– ಸರ್ಕಾರಿ ಆದೇಶ ಸಂ:ಲೋಇ 278 ಸೇಇವಿ 2016 ದಿ: 24.10.2016ನ್ನು ಮತ್ತು ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ದೋಷಾರೋಪಣಾ ಪಟ್ಟಿ ದಿ: 13.2.2017 ಅನ್ನು ಪ್ರಶ್ನಿಸಿ ಮಾನ್ಯ ನ್ಯಾಯ ಮಂಡಳಿಯಲ್ಲಿ ದಾಖಲಿಸಿದ ಅರ್ಜಿ ಸಂಖ್ಯೆ: 7565/2019 ರಲ್ಲಿ ಮಾನ್ಯ ಕೆ.ಎ.ಟಿಯು ದಿನಾಂಕ: 31.5.2021ರಂದು ನೀಡಿದ ಅಂತಿಮ ತೀರ್ಪಿನ ಮೇಲೆ ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ರಿಟ್ ಮೇಲ್ಮನವಿ ಸಲ್ಲಿಸಲು ಬಾಕಿ ಇದೆ)** ಮತ್ತು(5) ಶ್ರೀ.ಸೈಯದ್ ಕುತುಬ್ದೀನ್ ಖಾದ್ರಿ, ಸಹಾಯಕ ಅಭಿಯಂತರರು, ಲೋಕೋಪಯೋಗಿ ಉಪವಿಭಾಗ, ಭಾಲ್ಕಿ, ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ:
1. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/2623/2012/ಎಆರ್‌ಇ–5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 03/09/2016.
2. ಸರ್ಕಾರದ ಆದೇಶ ಸಂಖ್ಯೆ: ಲೋಇ 278 ಸೇಇವಿ 2016, ಬೆಂಗಳೂರು ದಿನಾಂಕ: 24/10/2016.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್–1/ಡಿಇ/677/2017, ಬೆಂಗಳೂರು ದಿನಾಂಕ: 30/11/2017.

****

ಈ ಇಲಾಖಾ ವಿಚಾರಣೆಯನ್ನು (1) ಶ್ರೀ.ಗುರಗುಂಟೆ ಶಿವಶಂಕರಪ್ಪ, ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ, ಬೀದರ, (2) ಶ್ರೀ.ಮನೋಹರ್ ಮಂಡೊಳ್ಳಿ, ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ, ಬೀದರ, (3) ಶ್ರೀ.ಮಲ್ಲಿಕಾರ್ಜುನ ಕರೋಜಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಹೆಚ್.ಬಿ, ಆಡಳಿತ ಭವನ, ಬಾಗಲಕೋಟೆ, (4) ಶ್ರೀ.ಅಮ್ಮಣ್ಣ ಶಂಕರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ವಿಭಾಗ, ಬೀದರ್ (ಹಾಲಿ ನಿವೃತ್ತ) ಮತ್ತು(5) ಶ್ರೀ.ಸೈಯದ್ ಕುತ್ಬುದ್ದೀನ್ ಖಾದ್ರಿ, ಸಹಾಯಕ ಅಭಿಯಂತರರು, ಲೋಕೋಪಯೋಗಿ ಉಪವಿಭಾಗ, ಭಾಲ್ಕಿ, ರವರ ವಿರುದ್ಧ ನೋಂದಣಿ ಮಾಡಿಕೊಳ್ಳಲಾಗಿದೆ. ಇನ್ನುಮುಂದೆ ಈ ಮೇಲೆ ಹೇಳಿದ 5 ಜನಗನ್ನು ಕ್ರಮವಾಗಿ ಆ.ಸ.ನೌ.1 ರಿಂದ 5 ಎಂದು ಉಲ್ಲೇಖಿಸಲಾಗುತ್ತದೆ.

**2.** ಸರ್ಕಾರದ ಆದೇಶ ಸಂಖ್ಯೆ: ಲೋಇ 278 ಸೇಇವಿ 2016, ಬೆಂಗಳೂರು ದಿನಾಂಕ: 24/10/2016 ರ ಮೇರೆಗೆ ಗೌರವಾನ್ವಿತ ಉಪಲೋಕಾಯುಕ್ತರವರು ತಮ್ಮ ನಾಮನಿರ್ದೇಶನ ಸಂಖ್ಯೆ.ಉಪಲೋಕ್–1/ಡಿಇ/677/2017, ಬೆಂಗಳೂರು ದಿನಾಂಕ: 30/11/2017 ರಂತೆ ಅಪರ ನಿಬಂಧಕರು ವಿಚಾರಣೆಗಳು–9 ರವರನ್ನು ಈ ಪ್ರಕರಣದಲ್ಲಿ ದೋಷಾರೋಪಣ ಪಟ್ಟಿ ರಚಿಸಿ, ವಿಚಾರಣೆ ಮಾಡಿ ವರದಿ ಸಲ್ಲಿಸಲು ವಿಚಾರಣಾಧಿಕಾರಿಯಾಗಿ ನೇಮಕ ಮಾಡಿರುತ್ತಾರೆ.

**3.** ದಿ.13/2/2017 ರಂದು ಅಂದಿನ ಅಪರ ನಿಬಂಧಕರು ವಿಚಾರಣೆಗಳು–9 ರವರು ದೋಷಾರೋಪಣೆ ಮತ್ತು ದೋಷಾರೋಪಣೆ ವಿವರ, ಸಾಕ್ಷಿದಾರರ ಪಟ್ಟಿ ಮತ್ತು ದಾಖಲೆಗಳ ಪಟ್ಟಿಯನ್ನು **ಅನುಬಂಧ–1 ರಿಂದ 5 ರಂತೆ** ರಚಿಸಿ, ಆ.ಸ.ನೌ.1 ರಿಂದ 5 ರವರಿಗೆ ಕಳುಹಿಸಿಕೊಟ್ಟಿದ್ದಾರೆ. ಸದರಿ ಅನುಬಂಧ–1 ರಿಂದ 5 ಕೆಳಕಂಡಂತಿದೆ.

**ANNEXURE-I**

**Charge:-**

*While you DGOs (1) Sri. Guragunte Shivashankarappa, the then Executive Engineer, PWD, Division, Bidar District (Presently working as Superintending Engineer PRE Circle, Kalaburgi) there was a Improvements to Aurad-Sadashivagad (SH-34) road from*

K.M. 35.60 to 39.60 and 41.60 to 42.00 KM in Bhalki Taluk- the total amount of deficiency found in bitumen binder content deficiency of work and caused financial loss of Rs. 59,509/-.

(2) Sri. Mandoli Manohar Shankarappa, Executive Engineer, PWD Bidar (Presently working at Minor Irrigation Division, Bidar there was a Improvements to Aurad-Sadashivagad (SH-34) road from K.M. 35.60 to 39.60 and 41.60 to 42.00 KM in Bhalki Taluk- the total amount of deficiency found in bitumen binder content deficiency of work and caused financial loss of Rs. 1,02,904/-.

(3) Sri. Mallikarjuna Karanje, the then Assistant Executive Engineer, KHB, Adalitha Bhavan, Bagalkote (Presently working at Rural Drinking Water and Sanitation Sub-Division, Aurad, Bidar District there was a Improvements to Aurad-Sadashivagad (SH-34) road from K.M. 35.60 to 39.60 and 41.60 to 42.00 KM in Bhalki Taluk- the total amount of deficiency found in bitumen binder content deficiency of work and caused financial loss of Rs. 89,862/-

(4) DGO No. 4 Sri. Ammanna Shankar,the then AEE PWD Division, Bidar ................ and

(5) Sri. Syed Kutbuddin Khadri, the then Assistant Executive Engineer, PWD Sub-Division, Bhalki (Presently working at PRE sub-Division, Bhalki, Bidar District) there was a repair to Aurad-Sadashivagad (SH-34) road from K.M. 21.202 to 21.60 kms and 35.60 to 48.00 kms in Bhalki Taluk- the total

*amount of deficiency found in bitumen binder content deficiency of work and caused financial loss of Rs. 2,44,220/-*

*and therefore you DGO No.1 to 5 have failed to maintain absolute integrity and devotion to duty and committed an act which is unbecoming of a Government Servants and therefore you are guilty of misconduct under Rule 3(1)(i) to (iii) of KCS (Conduct) Rules 1966. Hence, this charge.*

**ANNEXURE-II**

**STATEMENT OF IMPUTATION OF MISCONDUCT:**

2. On the basis of personal visit by the Hon'ble Upalokayukta to Bidar District, suo-motu investigation has been taken up against the concerned Engineers and officers working in PWD, Bhalki Taluk by the Hon'ble Upalokayukta invoking Section 7(2) of Karnataka Lokayukta Act.

3. Report was called for from TAC, Karnataka Lokayukta, Bangalore for making spot study, investigate and submit report about the road from Konamelakunda to Bhalki.

4. Investigation has been conducted by AEE-II, T.A.C. of Karnataka Lokayukta, (I.O. for short). The report of I.O. is that there is deficiency of Bitumen binder content in the following works and the value of deficit Bitumen binder content. The deficit bitumen binder, officers responsible for bitumen deficit binder content used for the work and the extent of their liability as shown by I.O., is as below:

| |
|---|
| I) Improvements to Aurad-Sadashivagad (SH-34) road from K.M. 35.60 to 39.60 and 41.60 to 42.00 KM in Bhalki Taluk- |

<table>
<tr><td colspan="6">the total amount of deficiency found in bitumen binder content is Rs.2,39,633-00</td></tr>
<tr><td colspan="6">i)Name of the officers responsible for and the extent of their liability</td></tr>
<tr><td colspan="2">Gurugunte Shivashankarra, the then EE, PWD, presently in PWD dept Circle, 25%</td><td colspan="2">Mandoli Manohar, then EE, PWD, Bidar, 25%</td><td colspan="2">Mallikarjuna Karanji, AEE, KHB, Bagalkot 37.50%</td></tr>
<tr><td colspan="2">59.509-00</td><td colspan="2">1,02,904/-</td><td colspan="2">89,862-00</td></tr>
<tr><td colspan="6">ii) Repairs to Aurad –Sadashivagad (SS-34) Road from KM 21.20 to 25.60 KM and 35.60 to 48.00 KM in Bhalki Taluk. The total value of deficiency found in the use of Bitumen binder contents is Rs.4, 11,620-00</td></tr>
<tr><td colspan="3">Ammanna Shankar, the then AEE. PWD presently AEE, KBJNL, JBC, Sub.divn, NO.12, Batmbra 37.50%</td><td colspan="3">Syed Kutbuddin Khadri, AEE. PWD Sub.Divn, Bhalki 37.50%</td></tr>
<tr><td colspan="3">Rs. 1,54,358</td><td colspan="3">Rs. 2,44,220/-</td></tr>
<tr><td colspan="6">iii) Sri.Basavaraj Sajjan Shetty, AEE, PWD, Quality Assurance Sub.Divn, Gulbarga has not verified the quality of work.</td></tr>
</table>

5. Officers who are said to be responsible for the substandard work mentioned in the report of I.O, have been impleaded as Respondent Nos.1 to 6 and copy of report of I.O. was sent to them for their reply and they have submitted reply denying the correctness of report of I.O.

6. Respondent No.4 and 6 have retired. There is no financial loss caused by Respondent No.6.

7. In view of the report of the I.O. which is based on the report of Quality Control Division, Bangalore, replies of

Respondent Nos.1 to 6 are not acceptable to drop the proceedings against them.

8. Since the said facts and materials on record prima facie show that Respondent Nos. (1) Sri.Gurugunte Shiva Shankarappa, Executive Engineer, PWD, Bidar, (2) Sri. Manohar Mandolli - Executive Engineer, PWD, Bidar, (3) Sri.Mallikarjuna Karaji-A.E.E, KHB Adalitha Bhavan, Bagalkote (4) Sri.Ammanna Shankar- AEE, PWD Division, Bidar District (now retired), (5) Sri.Syed Kutbuddin Khadri, AE, PWD Sub Divn, Bhalki, have committed misconduct under Rule 3(1) of KCS (Conduct) Rules, 1966 recommendation is made under section 12(3) of Karnataka Lokayukta Act, 1984 to the Competent Authority to initiate disciplinary proceedings against Respondent Nos.1 to 3 and 5 and to initiate disciplinary proceedings against Respondent No. (4) Sri. Ammanna Shankar- then AEE, PWD Division, Bidar under Rule 214(2)(b) of KCSRS as he has retired from service and the act of misappropriation is a continuous misconduct which has been committed by him and to entrust the inquiry to this Authority against Respondent Nos.1 to 5 under Rule 14-A of Karnataka Civil Service (Classifications, control and Appeal) Rules, 1957.

9. Since said facts and material on record prima facie show that, the respondents/DGOs (1) Sri. Guragunte Shivashankarappa (2) SriMandoli Manohara Shankarappa, (3) Sri. Mallikarjuna Karanje, (4) Ammanna Shankar and (5) Sri. Syed Kutbuddin Khadri have committed grave misconduct, now, acting under Section 12(3) of Karnataka Lokayukta Act,

recommendation is made to the Competent Authority to initiate disciplinary proceedings against the respondents for misconduct under Rule 3(1)(i) to (iii) of KCS(conduct) rules 1966 the Govt. after consideration of materials, has entrusted enquiry to Hon'ble Upalokayukta. Hence, the charge.

**4.** ಅನುಬಂಧ 1 ರಿಂದ 5ನ್ನು ಆ.ಸ.ನೌ.1 ರಿಂದ 5 ರವರಿಗೆ ಕಳುಹಿಸಿದ ನಂತರ ಅವರು ಹಾಜರಾಗಿ ದೋಷಾರೋಪಣೆಯ ಅಂಶಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ವಿಚಾರಣೆಯಾಗಬಹುದು ಎಂದು ತಿಳಿಸಿರುತ್ತಾರೆ. ತದನಂತರ, ಆ.ಸ.ನೌ.2, 4 ಮತ್ತು 5 ರವರು ಒಟ್ಟಾಗಿ ಒಂದು ಹೇಳಿಕೆಯನ್ನು ಮತ್ತು ಆ.ಸ.ನೌ.1 ಮತ್ತು 3 ರವರು ಒಟ್ಟಾಗಿ ಒಂದು ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

**5.** ಆ.ಸ.ನೌ.2, 4 ಮತ್ತು 5 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ದಿ.01/11/2012 ರಂದು ಕೈಗೊಂಡ ಸ್ಥಳ ಪರಿವೀಕ್ಷಣೆಯಲ್ಲಿ ಎಲ್ಲಾ 03 ಹೊಂಡಗಳಲ್ಲಿ ಎಸ್.ಡಿ.ಬಿ.ಸಿ. (25 ಎಂಎಂ) ದಪ್ಪ ಸರಿಯಾಗಿದ್ದುದು ಮಹಜರ್ ಮತ್ತು ತನಿಖಾ ವರದಿಯಲ್ಲಿ ತಿಳಿಯುತ್ತದೆಂದು ಪ್ರತಿಪಾದಿಸುತ್ತಾರೆ. ಮುಂದುವರೆದು 2008-09ರಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ತಾಂತ್ರಿಕ ಮಂಜೂರಾತಿ ನೀಡಲಾಗಿದ್ದು, ಆ ಸಮಯದಲ್ಲಿ, 2ನೇ ಆಪಾದಿತರಾದ ಶ್ರೀ.ಮಂಡೋಳಿ ಮನೋಹರ್ ಶಂಕರಪ್ಪ, ರವರು ಕಾರ್ಯನಿರ್ವಾಹಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರೆಂದು ತಿಳಿಸಿದ್ದಾರೆ. ಮುಂದುವರೆದು, ಪ್ರಶ್ನಿತ ಕಾಮಗಾರಿಯನ್ನು ದಿ.23/10/2011 ರಂದು ಪ್ರಾರಂಭಿಸಿ ದಿ.22/04/2012 ರಂದು ಮುಕ್ತಾಯಗೊಳಿಸಿದ್ದು, ಆ ಸಮಯದಲ್ಲಿ 2ನೇ ಆಪಾದಿತರು ಕೆಲಸ ನಿರ್ವಹಿಸುತ್ತಿರಲಿಲ್ಲವೆಂದು, ಅವರು ಬೀದರ್ ವಿಭಾಗದಿಂದ 2010 ರಲ್ಲೇ ವರ್ಗಾವಣೆ ಆಗಿದ್ದರು. ಆದರೆ, ಲೋಕಾಯುಕ್ತ ಸಂಸ್ಥೆಯ ತನಿಖಾಧಿಕಾರಿ, 2ನೇ ಆಪಾದಿತರ ವಿರುದ್ಧ ಅವರು ಸರ್ಕಾರಕ್ಕೆ ರೂ.1,02,904/-ಗಳ ನಷ್ಟವನ್ನುಂಟುಮಾಡಿರುವುದಾಗಿ ಸಮರ್ಥಿಸಲಾಗದ ಸುಳ್ಳು ಆರೋಪವನ್ನು ಮಾಡಿರುತ್ತಾರೆಂದು ತಿಳಿಸಿರುತ್ತಾರೆ.

6. ಮುಂದುವರೆದು, 4ನೇ ಆಪಾದಿತ ಶ್ರೀ.ಅಮ್ಮಣ್ಣ ಶಂಕರ್ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಭಾಲ್ಕಿ ತಾಲ್ಲೂಕಿನ ಔರಾದ್–ಸದಾಶಿವಗಡ್ (ರಾಜ್ಯ ಹೆದ್ದಾರಿ–34) ರಸ್ತೆ 21.202 ಕಿ.ಮೀ. ಇಂದ 21.60 ಕಿ.ಮೀ. ಮತ್ತು 35.60 ಕಿ.ಮೀ. ಇಂದ 48 ಕಿ.ಮೀ. ವರೆಗಿನ ರಸ್ತೆ ದುರಸ್ತಿ ಕಾಮಗಾರಿಯನ್ನು ಮಾಡಿದ್ದರೆಂದು ಒಪ್ಪಿರುತ್ತಾರೆ. ಆದರೆ, ಲೋಕಾಯುಕ್ತ ಸಂಸ್ಥೆಯ ತನಿಖಾಧಿಕಾರಿಯವರು ಹೊಂಡಗಳ ಪರೀಕ್ಷೆಗಳಲ್ಲಿ 'ಚೈನೇಜ್' ಗಳಲ್ಲಿ 43.650 (ಎಲ್.ಎಸ್) ಮತ್ತು 44.090 (ಆರ್/ಎಸ್) ಗಳನ್ನು ಪರಿಗಣಿಸಿದ್ದು, ಹೊಂಡಗಳ ಸಾಂಧ್ರತೆಯನ್ನು (thickness) ನಮೂದಿಸಿರುವುದಿಲ್ಲವೆಂದು, ಅಂದಾಜು/ಟೆಂಡರ್ /ಒಪ್ಪಂದದಲ್ಲಿ 75 ಎಂಎಂ ಗೆ ಗ್ರೇಡ್–II & III ರ ಲೋಹದ ಅವಕಾಶವನ್ನು ಕಲ್ಪಿಸಲಾಗಿದ್ದು, ಅಲ್ಲಿ ಲೋಹದ ತೂಕಕ್ಕೆ ಆಸ್ಪದವಿರುವುದಿಲ್ಲವೆಂದು ತಿಳಿಸಿರುತ್ತಾರೆ.

7. ದಿ.16/01/2010 ರಂದು ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, ದಿ.01/11/2012 ರಲ್ಲಿ ಅಂದರೆ ಸರಿಸುಮಾರು ರಸ್ತೆ ಕಾಮಗಾರಿ ಪೂರ್ಣಗೊಂಡ 03 ವರ್ಷಗಳ ಆನಂತರ ತಪಾಸಣೆಯನ್ನು ಕೈಗೊಳ್ಳಲಾಗಿರುತ್ತದೆ ಎಂದು ಅಂತಹ ಲೋಹವನ್ನು ಒದಗಿಸುವ ಕಾಮಗಾರಿಯನ್ನು ಸಾಂಧ್ರತೆ ಆಧಾರದ ಮೇಲೆ ಅಳೆದು ಹಣದ ಪಾವತಿಯನ್ನು ಕ್ಯೂಬಿಕ್ ಮೀಟರ್‌ನಲ್ಲಿ ಮಾಡಲಾಗಿರುತ್ತದೆಂದು ತಿಳಿಸಿರುತ್ತಾರೆ. ಮುಂದುವರೆದು, ಇಡೀ ವಿಸ್ತೃತ ಕಾಮಗಾರಿಯ ಉದ್ದ X ಅಗಲ X ಸಾಂದ್ರತೆಯ ದೃಷ್ಟಿಯಿಂದ ಸಮರ್ಪಕವಾಗಿ ಅಳತೆ ಮಾಡಿದಾಗ ಕಾಮಗಾರಿಯಲ್ಲಿ ಬಳಸಲಾದ ಲೋಹದ ಬಗ್ಗೆ ಬಂದಿರುವ ತೀರ್ಮಾನ ಸತ್ಯಕ್ಕೆ ದೂರವಾಗಿರುತ್ತದೆಂದು ತಿಳಿಸಿರುತ್ತಾರೆ. ಮುಂದುವರೆದು, ಅಗತ್ಯವಾದ ಇತರೆ ವಿವರಗಳ ಬಗ್ಗೆ ಖಚಿತವಾಗಿ ತಿಳಿಸದೇ ಇರುವುದರಿಂದ, ಗ್ರೇಡ್– II & III ರ ತೂಕವನ್ನು ಕೆ.ಜಿ.ಗಳಲ್ಲಿ ನಮೂದಿಸುವುದು ಸಹ ಅತ್ಯಂತ ಅಸ್ಪಷ್ಟವಾಗಿರುತ್ತದೆಂದು ತಿಳಿಸಿರುತ್ತಾರೆ. ಮುಂದುವರೆದು, ಬಳಕೆ ಮಾಡಲಾದ ಲೋಹದ ಸಾಂದ್ರತೆಯನ್ನು ನಿರ್ಧರಿಸಲು ಅಳತೆಯನ್ನು ಕೈಗೊಂಡ ಸಂಖ್ಯೆ/ಪ್ರಮಾಣವನ್ನು ಮತ್ತು ಹೊಂಡಗಳನ್ನು ಹೇಗೆ ಪರೀಕ್ಷೆ

ಮಾಡಬೇಕು ಎಂಬುದನ್ನು MORTH ನಲ್ಲಿ ನಿರ್ದಿಷ್ಟ ಪಡಿಸಿರುವ ಪ್ರಕಾರ ತನಿಖಾಧಿಕಾರಿಯವರು ಅನುಸರಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ದೃಷ್ಟಿಯಿಂದ, ಲೋಹದ ಬೈಂಡರ್ ಸಂಯೋಜನೆಗೆ ಸಂಬಂಧಿಸಿದಂತೆ, 04ನೇ ಆಪಾದಿತರು ಸರ್ಕಾರಕ್ಕೆ ರೂ.1,54,358/- ಗಳ ನಷ್ಟವನ್ನು ಉಂಟುಮಾಡಿರುತ್ತಾರೆ ಎನ್ನುವ ಲೋಕಾಯುಕ್ತ ತನಿಖಾಧಿಕಾರಿಯವರ ಲೆಕ್ಕಾಚಾರ ಸಮರ್ಥಿಸಲಾಗದ ಸುಳ್ಳು ಆರೋಪವಾಗಿದೆ ಎಂದು ತಿಳಿಸಿರುತ್ತಾರೆ.

**8.** 5ನೇ ಆಪಾದಿತರಾದ ಶ್ರೀ.ಸೈಯದ ಕುತುಬುದ್ದೀನ್ ಖಾದ್ರಿ, ಹಿಂದಿನ ಸಹಾಯಕ ಅಭಿಯಂತರರವರು, ತಾವು ಕಾರ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಬಾಲ್ಕಿ ತಾಲ್ಲೂಕಿನ ಔರಾದ್-ಸದಾಶಿವಗಡ್ (ರಾಜ್ಯ ಹೆದ್ದಾರಿ-34) ರಸ್ತೆ 21202.60 ಕಿ.ಮೀ. ಇಂದ 21.60 ಕಿ.ಮೀ. ಮತ್ತು 35.60 ಕಿ.ಮೀ, ಇಂದ 48 ಕಿ.ಮೀ. ವರೆಗಿನ ರಸ್ತೆ ದುರಸ್ತಿ ಕಾಮಗಾರಿಯನ್ನು ಮಾಡಿದ್ದರು ಎಂದು ಒಪ್ಪಿರುತ್ತಾರೆ. ಆದರೆ, ರಸ್ತೆ ದುರಸ್ತಿಯ ಈ ಕಾಮಗಾರಿಯ ವಿಸ್ತರಣೆಯಲ್ಲಿ ಪ್ರತಿ 75 ಎಂಎಂ ಗೆ ಕೇವಲ ಗ್ರೇಡ್-II & III ರ ಸಾಂದ್ರತೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿ ಅವರ ವಿರುದ್ಧ ಮಾಡಲಾದ ಆರೋಪವನ್ನು ಅಲ್ಲಗಳೆದಿದ್ದಾರೆ.

**9.** 1 ಮತ್ತು 3ನೇ ಆಪಾದಿತರು ಪ್ರತಿವಾದ ಪತ್ರವನ್ನು ಸಲ್ಲಿಸಿ, ಅವರ ವಿರುದ್ಧ ಮಾಡಲಾದ ಆರೋಪಗಳನ್ನು ಅಲ್ಲಗಳೆದಿದ್ದಾರೆ. ಮುಂದುವರೆದು, ಕಾಮಗಾರಿಯನ್ನು ಕೈಗೊಂಡ ಸಮಯದಲ್ಲಿದ್ದ ವಿವರಗಳ ಪ್ರಕಾರ ಕಾಮಗಾರಿಯ ಸಾಮಾಗ್ರಿಗಳನ್ನು ಬಳಸಿ ಗುತ್ತಿಗೆದಾರರ ಮೂಲಕ ಪ್ರತಿಯೊಂದು ಸಾಮಾಗ್ರಿಯನ್ನು ಪಡೆದು ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಮುಂದುವರೆದು, ತನಿಖಾಧಿಕಾರಿಯ ವರದಿಯಂತೆ ಬೈಂಡರ್ ಸಂಯೋಜನೆಯ ಕೊರತೆಯಿಂದ 1 ಮತ್ತು 3ನೇ ಆಪಾದಿತರು ಅನುಕ್ರಮವಾಗಿ ರೂ.59,509/- ಗಳನ್ನು ಮತ್ತು ರೂ.79,862/- ಗಳ ನಷ್ಟವನ್ನು ಸರ್ಕಾರಕ್ಕೆ ಉಂಟುಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮುಂದುವರೆದು, ತನಿಖಾಧಿಕಾರಿಯ ಶೋಧನೆಗಳು ಸಂಪೂರ್ಣವಾಗಿ

ತಪ್ಪಾಗಿದ್ದು, ವಾಸ್ತವಾಂಶಗಳ ತಪ್ಪು ತಿಳುವಳಿಕೆಯಿಂದ ಮತ್ತು ತಪ್ಪು ಕಲ್ಪನೆಯಿಂದ ಉಂಟಾದ ದೋಷವೆಂದು ತಿಳಿಸಿರುತ್ತಾರೆ. ಮುಂದುವರೆದು, ಪ್ರಶ್ನಿತ ಕಾಮಗಾರಿಯಲ್ಲಿ ಯಾವುದೇ ರೀತಿಯ ಬಿಟುಮೆನ್ ಬೈಂಡರ್ ಸಂಯೋಜನೆಯ ಕೊರತೆ ಉಂಟಾಗಿರುವುದಿಲ್ಲವೆಂದು ಕಾಲಾವಧಿ ಮೀರಿದ ಕಾರಣದಿಂದ ಅರ್ಥೈಸಿಕೊಳ್ಳುವಲ್ಲಿ ಇಂತಹ ಆರೋಪವನ್ನು ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಮುಂದುವರೆದು, ಫಿರ್ಯಾದಿ ಮತ್ತು ಆಪಾದಿತರ ಗೈರುಹಾಜರಿಯಲ್ಲಿ, ಬಿಟುಮೆನ್ ಸಂಯೋಜನೆಯ ಸ್ಥಳ ಪರೀಕ್ಷೆಯನ್ನು ತಪ್ಪಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಮುಂದುವರೆದು, ನಿರ್ಮಾಣ ಸಾಮಾಗ್ರಿಗಳು ಹಾಗೂ ಸಿದ್ಧಪಡಿಸಿದ ಉತ್ಪನ್ನಗಳು ಅಗತ್ಯವಾದ ಗುಣಮಟ್ಟದವುಗಳಾಗಿರುತ್ತದೆ ಎಂದು ತಿಳಿಯಪಡಿಸಲು ನಿಯಮಿತವಾಗಿ ಮತ್ತು ಕಾಲಕಾಲಕ್ಕೆ ಪರೀಕ್ಷೆಗಳನ್ನು ನಡೆಸುವ ಜವಾಬ್ದಾರಿಯುಳ್ಳ ಮುಖ್ಯ ಅಭಿಯಂತರರು ಮುಖ್ಯಸ್ಥರಾಗಿ ಇತರೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿರುವ ಕ್ಯೂ.ಸಿ. ಉಪವಿಭಾಗದ ಪ್ರತ್ಯೇಕ ಘಟಕದ ಮೂಲಕ ಕೈಗೊಂಡ ಪರೀಕ್ಷೆಗಳ ಫಲಿತಾಂಶಗಳಿಗೆ ವಿರುದ್ಧವಾದ ಫಲಿತಾಂಶಗಳು ತನಿಖಾಧಿಕಾರಿಯವರು ಏರ್ಪಡಿಸಿ, ಕೈಗೊಂಡ ಪರೀಕ್ಷೆಗಳಿಂದ ಹೊರಹೊಮ್ಮಿರುತ್ತವೆಯೆಂದು ತಿಳಿಸಿರುತ್ತಾರೆ. ಮುಂದುವರೆದು, ತರ್ಕಬದ್ಧ ತೀರ್ಮಾನಕ್ಕೆ ಬರಲು ಮತ್ತು ಸೂಕ್ತವಾದ ತೀರ್ಮಾನಕ್ಕೆ ಬರಲು 2 ವಿಭಿನ್ನವಾದ ಗುಣಮಟ್ಟ ನಿಯಂತ್ರಣ ಘಟಕಗಳು ನೀಡಿದ ಪರೀಕ್ಷಾ ಫಲಿತಾಂಶಗಳಿಂದ ಹೊರಬಿದ್ದ ವ್ಯತ್ಯಾಸಗಳನ್ನು ತಿಳಿಯಲು ತನಿಖಾಧಿಕಾರಿ ಸಂಬಂಧಿಸಿದ ಗುಣಮಟ್ಟ ಅಧಿಕಾರಿಗಳೊಡನೆ ಚರ್ಚಿಸಿಲ್ಲವೆಂದು ತಿಳಿಸಿರುತ್ತಾರೆ. ಹೀಗಾಗಿ, 1 ಮತ್ತು 3ನೇ ಆಪಾದಿತರು ತಮ್ಮ ಮೇಲೆ ಮಾಡಲಾದ ಆರೋಪಗಳ ತಪ್ಪಿತಸ್ಥರಲ್ಲವೆಂದು, ಆದ್ದರಿಂದ, ತಮ್ಮನ್ನು ಆರೋಪಗಳಿಂದ ಕೈಬಿಡಲು ಕೋರಿದ್ದಾರೆ.

**10.** ದಿ: 14.12.2021 ರಂದು ಅಧ್ಯಕ್ಷರು, ಕಾನೂನು ಕೋಶ, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ಪತ್ರದಲ್ಲಿ 4ನೇ ಆ.ಸ.ನೌಕರರಾದ ಶ್ರೀ.ಅಮ್ಮಣ್ಣ ಶಂಕರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ವಿಭಾಗ, ಬೀದರ್ (ಹಾಲಿ ನಿವೃತ್ತ) ರವರು ಸರ್ಕಾರದ ಆದೇಶ ಸಂ:ಲೋಇ 278 ಸೇಇವಿ 2016

ದಿ: 24.10.2016ನ್ನು ಮತ್ತು ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ದೋಷಾರೋಪಣಾ ಪಟ್ಟಿ ದಿ: 13.2.2017 ಅನ್ನು ಪ್ರಶ್ನಿಸಿ ಮಾನ್ಯ ನ್ಯಾಯ ಮಂಡಳಿಯಲ್ಲಿ ದಾಖಲಿಸಿದ ಅರ್ಜಿ ಸಂಖ್ಯೆ: 7565/2019 ರಲ್ಲಿ ಈ ಪ್ರಕರಣ ವಾದ ಮಂಡನೆಯಲ್ಲಿ ಸದರಿ ಸರ್ಕಾರಿ ಆದೇಶ ಮತ್ತು ದೋಷಾರೋಪಣಾ ಪಟ್ಟಿಯನ್ನು ವಜಾ ಮಾಡಿದೆ, ಮಾನ್ಯ ಕೆ.ಎ.ಟಿಯು ದಿನಾಂಕ: 31.5.2021ರಂದು ನೀಡಿದ ಅಂತಿಮ ತೀರ್ಪಿನ ಮೇಲೆ ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ರಿಟ್ ಮೇಲ್ಮನವಿ ಸಲ್ಲಿಸಲು ಶ್ರೀ. ಸುಭಾಷ್ ಮಲ್ಲಾಪುರ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್, ಕರ್ನಾಟಕ ಲೋಕಾಯುಕ್ತ, ಗುಲ್ಬರ್ಗ ರವರಿಗೆ ಅಧಿಕಾರ ವಹಿಸಲಾಗಿದೆ ಎಂದು ತಿಳಿಸಿರುತ್ತಾರೆ. ಮೇಲ್ಮನವಿಯ ತೀರ್ಪು ಬರುವವರೆಗೆ ಆ.ಸ.ನೌಕರರ 4 ರವರ ವಿರುದ್ಧ ಇಲಾಖಾ ವಿಚಾರಣೆಯನ್ನು ಮುಂದೂಡಬಹುದು.

**11.** ಮಂಡನಾಧಿಕಾರಿಯವರು ತನಿಖಾಧಿಕಾರಿಯವರನ್ನು ಸಾಕ್ಷಿ-1 ರಂತೆ ವಿಚಾರಣೆ ಮಾಡಿದ್ದಾರೆ. ಆ.ಸ.ನೌ.1 ರಿಂದ 5 ರವರ ವಕೀಲರು ಅವರನ್ನು ಪಾಟೀ ಸವಾಲು ಮಾಡಿದ್ದಾರೆ. ತದನಂತರ, ಆ.ಸ.ನೌ.1 ರಿಂದ 5 ರವರ 2ನೇ ಮೌಖಿಕ ಹೇಳಿಕೆಯನ್ನು ಪಡೆದಿದ್ದು, ಅವರು ತಮ್ಮ ಪರ ಸಾಕ್ಷ್ಯ ಇಲ್ಲವೆಂದು ನುಡಿದಿದ್ದರಿಂದ, ಪ್ರಶ್ನಾವಳಿಯನ್ನು ರಚಿಸಿ, ಓದಿ ಕೇಳಿದ್ದು, ಅವರ ವಿರುದ್ಧದ ಸಾಕ್ಷ್ಯವನ್ನು ಅಲ್ಲಗಳೆದಿದ್ದಾರೆ. ತದನಂತರ, ಮಂಡನಾಧಿಕಾರಿಯವರು ವಾದವನ್ನು ಮಂಡಿಸಿದ್ದಾರೆ. ಆ.ಸ.ನೌ-1 ರಿಂದ 3 ಮತ್ತು 5 ರವರು ಲಿಖಿತ ವಾದವನ್ನು ಸಲ್ಲಿಸಿದ್ದಾರೆ. ಎಲ್ಲವನ್ನು ಪರಿಶೀಲಿಸಿದಾಗ ಕೆಳಕಂಡ ಅಂಶ ಗಣನೆಗೆ ಬರುತ್ತದೆ.

ಅಂಶ-1: ಆ.ಸ.ನೌ.1 ರಿಂದ 3 ಮತ್ತು 5 ರವರ ಮೇಲೆ ಮಾಡಿದ ಆರೋಪಗಳು ಸಾಬೀತಾಗಿದೆಯೇ?

ಉತ್ತರ : ಈ ಪ್ರಶ್ನೆಗೆ ನನ್ನ ಉತ್ತರ ಸಕಾರಾತ್ಮಕವಾಗಿದೆ. ಕೆಳಕಂಡ ಕಾರಣಗಳಿಗಾಗಿ.

**ಕಾರಣಗಳು**

**12.** ಸಾಕ್ಷಿ–1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆ.ಸ.ನೌ.1 ರಿಂದ 5 ರವರ ಸಮಕ್ಷಮದಲ್ಲಿ ತಾವು ತನಿಖೆ ನಡೆಸಿರುವುದಾಗಿ ತನಿಖೆ ಸಂದರ್ಭದಲ್ಲಿ ಬಾಲ್ಕಿ ತಾಲ್ಲೂಕಿನ ಔರಾದ್ –ಸದಾಶಿವಗಡ ರಸ್ತೆಯ ಕಿ.ಮೀ.35.6 ರಿಂದ 39.6 ವರೆಗೆ ಹಾಗೂ 41.6 ರಿಂದ 42.00 ಕಿ.ಮೀ. ವರೆಗೆ ಪ್ಯಾಕೇಜ್ 1 ರಲ್ಲಿ ಅಭಿವೃದ್ಧಿ ಮಾಡಲಾಗಿತ್ತೆಂದು, ಈ ಕಾಮಗಾರಿಯಲ್ಲಿ ಬಿಲ್ಡಪ್ ಸ್ಪ್ರೇಗ್ರೌಟ್ ಹಾಗೂ 25 ಮಿ.ಮೀ. ದಪ್ಪದ ಎಸ್.ಡಿ.ಬಿ.ಸಿ. ಅಂಶವನ್ನು ಪ್ರಮುಖವಾಗಿ ಅಳವಡಿಸಿಕೊಂಡಿದ್ದಾರೆಂದು ತಿಳಿಸಿರುತ್ತಾರೆ. ಮುಂದುವರೆದು, ಅಳತೆ ಪುಸ್ತಕದ ಸಂಖ್ಯೆ 7326 ರ ಪುಟ 50 ರಿಂದ 52 ಮತ್ತು 53 ರಿಂದ 55 ರಲ್ಲಿ, ರಸ್ತೆಯ ಯಾವುದೇ ಭಾಗದಲ್ಲಿ ಪರೀಕ್ಷಾ ಹೊಂಡಗಳನ್ನು ತೆಗೆದರೂ, ಅಳತೆ ಪುಸ್ತಕದಲ್ಲಿ ದಾಖಲಿಸಿದ ಅಳತೆ ಕಂಡುಬರುತ್ತದೆಯೆಂದು ನಮೂದಿಸಿದ್ದರಿಂದ ಪ್ರಸಕ್ತ ಸಾಲಿನಲ್ಲಿ ಕೇವಲ ಎಸ್.ಡಿ.ಬಿ.ಸಿ. ಕಾಮಗಾರಿಯನ್ನು ಮಾತ್ರ ಕೈಗೊಂಡಿದ್ದರಿಂದ ತಮ್ಮೊಂದಿಗೆ ಸ್ಥಳ ಪರಿಶೀಲನೆಗೆ ಬಂದಿದ್ದ ಗುಣನಿಯಂತ್ರಣ (ಗುಲ್ಬರ್ಗಾ ಉಪವಿಭಾಗ) ಅಧಿಕಾರಿಗಳಿಂದ ರಸ್ತೆಯ ಭಿನ್ನ ಸರಪಳಿಗಳಲ್ಲಿ 0.15X0.15 ಮೀ. ಅಳತೆಯ ಡಾಂಬರಿನ ಮೇಲ್ಮೈನ ಹೊಂಡಗಳನ್ನು ಹಳೆಯ ಡಾಂಬರಿನ ಮೇಲ್ಮೈ ಕಾಣುವವರೆಗೆ ತೆಗೆಸಿ, ಅದರಲ್ಲಿನ ಬಿಟಮಿನ್ ಮಾದರಿಯನ್ನು ಹಾಜರಿದ್ದ ಅಧಿಕಾರಿಗಳ ಸಹಿ ಪಡೆದು ಪಾಲಿಥಿನ್ ಚೀಲದಲ್ಲಿ ಸಂಗ್ರಹಿಸಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಲಾಖೆ, ಗುಣನಿಯಂತ್ರಣ ವಿಭಾಗ, ಇಲ್ಲಿಗೆ ಡಾಂಬರಿನ ಪರಿಮಾಣ ಪರೀಕ್ಷೆಗೆ (ಬೈಂಡರ್ ಟೆಸ್ಟ್)ಗೆ ಸಲ್ಲಿಸಿದ್ದು, ಅವರಿಂದ ದಿ:26/12/2022 ರಂದು ವರದಿ ಬಂದಿದ್ದು, ಆ ವರದಿಯ ಪ್ರಕಾರ ಎಸ್.ಡಿ.ಬಿ.ಸಿ. ಯಲ್ಲಿ ಡಾಂಬರಿನ ಪರಿಮಾಣದ ಕೊರತೆ ಇತ್ತೆಂದು ಆದ್ದರಿಂದ, ತಾವು ನಿ.ಪಿ–3 ರಂತೆ ವರದಿ ಸಲ್ಲಿಸಿದ್ದಾಗಿ ತಿಳಿಸಿದ್ದಾರೆ.

**13.** ಮುಂದುವರೆದು, 2ನೇ ಪ್ಯಾಕೇಜ್ ಔರಾದ್ ಸದಾಶಿವಗಡ ರಸ್ತೆಯ ಕಿ.ಮೀ. 21.20 ರಿಂದ 25.60 ಕಿ.ಮೀ. ಮತ್ತು 35.60 ರಿಂದ 48.00 ಕಿ.ಮೀ. ವರೆಗೆ ಆಯ್ದ ಭಾಗಗಳಲ್ಲಿ ದುರಸ್ತಿ ಕಾಮಗಾರಿ ಮಾಡಲಾಗಿತ್ತೆಂದು, ಈ ಕಾಮಗಾರಿಯಲ್ಲಿ

ಗ್ರೇಡ್-(II & III) ರ ಜಲ್ಲಿಯನ್ನು 75 ಮಿ.ಮೀ. ದಪ್ಪಗೆ ಹರಡಲು ಪ್ರಮುಖವಾಗಿ ಅಳವಡಿಸಿದ್ದಾರೆಂದು, ಸದರಿ ರಸ್ತೆ ಕಾಮಗಾರಿಯನನು ಪರಿಶೀಲಿಸಲಾಗಿ, ಡಾಂಬರಿನ ರಸ್ತೆಯ ಮೇಲ್ಮೈ ಬಹುತೇಕ ಭಾಗಗಗಳಲ್ಲಿ ಗುಂಡಿಗಳಾಗಿದ್ದು, ರಸ್ತೆಯ ಮೇಲ್ಮೈ ಶಿಥಿಲವಾಗಿತ್ತೆಂದು ತಿಳಿಸಿರುತ್ತಾರೆ. ಮುಂದುವರೆದು ಈ ಕಾಮಗಾರಿಯ ಅಳತೆಗಳನ್ನು ಅಳತೆ ಪುಸ್ತಕದ ಸಂಖ್ಯೆ 755 ರ ಪುಟ 6 ರಿಂದ 11 ರಲ್ಲಿ ದಾಖಲಿಸಿದಂತೆ, ರಸ್ತೆಯ ಯಾವುದೇ ಭಾಗದಲ್ಲಿ ಪರೀಕ್ಷಾ ಹೊಂಡಗಳನ್ನು ತೆಗೆದರೂ, ಅಳತೆ ಪುಸ್ತಕದಲ್ಲಿ ದಾಖಲಿಸಿದ ಅಳತೆ ಕಂಡುಬರಬೇಕಾಗಿದ್ದುದರಿಂದ, ಪ್ರಸಕ್ತ ಸಾಲಿನಲ್ಲಿ ಕೇವಲ ಎಸ್.ಡಿ.ಬಿ.ಸಿ. ಕಾಮಗಾರಿಯನ್ನು ಮಾತ್ರ ಕೈಗೊಂಡಿದ್ದರಿಂದ ತಮ್ಮೊಂದಿಗೆ ಸ್ಥಳ ಪರಿಶೀಲನೆಗೆ ಬಂದಿದ್ದ ಗುಣನಿಯಂತ್ರಣ (ಗುಲ್ಬರ್ಗಾ ಉಪವಿಭಾಗ) ಅಧಿಕಾರಿಗಳಿಂದ ರಸ್ತೆಯ ಭಿನ್ನ ಸರಪಳಿಗಳಲ್ಲಿ 0.5X0.5 ಮೀ. ಅಳತೆಯ ಡಾಂಬರಿನ ಮೇಲ್ಮೈನ ಹೊಂಡಗಳನ್ನು ತೆಗೆಸಿ, ಅದರ ತೂಕವನ್ನು ತನಿಖಾ ವರದಿಯಲ್ಲಿ ನಮೂದಿಸಿದ್ದು, ರಸ್ತೆಯ ಆ ಸರಪಳಿಗಳಲ್ಲಿ ಅಂದರೆ 43.650 ಕಿ.ಮೀ. ಯ ಎಡಭಾಗ ಹಾಗೂ 44.090 ಕಿ.ಮೀ. ಯ ಬಲಭಾಗ ಕ್ರಮವಾಗಿ 34.853 ಕೆ.ಜಿ. ಹಾಗೂ 35.138 ಕೆ.ಜಿ. ಗಳಷ್ಟು ಇದ್ದದ್ದು ಕಂಡುಬಂದಿದ್ದು, ಅವುಗಳ ಜಲ್ಲಿಯ ಸಾಂದ್ರತೆಯ ಆಧಾರದ ಮೇಲೆ ಲೆಕ್ಕಾಚಾರ ಮಾಡಿದಾಗ ನಿಗದಿತ ತೂಕವಿಲ್ಲದೇ ಇದ್ದುದ್ದು ಕಂಡುಬಂದಿದ್ದು, ಈ ಸಂಬಂಧ ಗ್ರೇಡ್-( II & III) ರ ಅಳವಡಿಕೆಯಲ್ಲಿ ನ್ಯೂನ್ಯತೆ ಕಂಡುಬಂದಿದ್ದು, ಸದರಿ ನ್ಯೂನ್ಯತೆಗಳನ್ನು ಲೆಕ್ಕಾಚಾರ ಮಾಡಿದಾಗ ರೂ.4,11,620/- ನಷ್ಟವಾಗಿರುವುದು ಕಂಡುಬಂತು ಎಂದು, ಹಾಗಾಗಿ ನಿ.ಪಿ-4 ರಂತೆ ವರದಿ ನೀಡಲಾಯಿತೆಂದು ಒಟ್ಟಾರೆ ಪ್ಯಾಕೇಜ್1 & 2 ರಲ್ಲಿ ರೂ.6,51,253/- ಗಳು ನಷ್ಟವಾಗಿದ್ದು, ಇದಕ್ಕೆ ಆ.ಸ.ನೌ-1 ರವರು ರೂ.59,909/- ಗಳಿಗೆ, ಆ.ಸ.ನೌ-2 ರವರು ರೂ.1,02,904/- ಗಳಿಗೆ, ಶ್ರೀ. ಮಲ್ಲಿಕಾರ್ಜುನ ಕಾರಂಜಿ ರವರು ರೂ.89,862/-ಗಳಿಗೆ, 4ನೇ ಆ.ಸ.ನೌ.ರವರು ರೂ.1,54,358/-ಗಳಿಗೆ, 5ನೇ ಆ.ಸ.ನೌ.ರವರು ರೂ. 1,54,358/- ಹಾಗೂ ರೂ.89,862/-ಗಳಿಗೆ ಜವಾಬ್ದಾರರು ಎಂದು ತಿಳಿಸಿರುತ್ತಾರೆ. ಒಟ್ಟಾರೆ ಎಲ್ಲಾ

ಆ.ಸ.ನೌ.ರವರು ರೂ.2,44,220/–ಗಳಿಗೆ ಜವಾಬ್ದಾರರಾಗಿರುತ್ತಾರೆಂದು ಈ ಬಗ್ಗೆ ತಾನು ನಿ.ಪಿ–6 ತನಿಖಾ ವರದಿಯಲ್ಲಿ ತಿಳಿಸಿರುವುದಾಗಿ ಹೇಳಿದ್ದಾರೆ.

**14.** ಸಾಕ್ಷಿದಾರರನ್ನು ಎದುರುದಾರರ ವಕೀಲರು ಪಾಟೀ ಸವಾಲು ಮಾಡಿದ್ದರು. ಪಾಟೀ ಸವಾಲಿನಲ್ಲಿ ಪ್ಯಾಕೇಜ್ 1 ರ ಅಂದಾಜುಪಟ್ಟಿಯಲ್ಲಿ ಎಸ್.ಡಿ.ಬಿ.ಸಿ. ದಪ್ಪವನ್ನು 25 ಮಿ.ಮೀ. ಗೆ ಅನುವು ಮಾಡಿಕೊಟ್ಟಿದ್ದು, ಆದರೆ ಸದರಿ ಕಾಮಗಾರಿಯನ್ನು ಅದಕ್ಕಿಂತ ಹೆಚ್ಚಾಗಿ ನಿರ್ವಹಿಸಿರುವುದು ಕಂಡುಬಂದಿರುತ್ತದೆ ಎಂದರೆ ಸರಿ ಎಂದು ಒಪ್ಪಿದ್ದಾರೆ. ಮುಂದುವರೆದು, ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ 7326ನೇ ಎಂ.ಬಿ.ಪುಸ್ತಕದ ಪುಟ 50 ರಿಂದ 55 ರಲ್ಲಿ ಎಸ್.ಡಿ.ಬಿ.ಸಿ. ಪದರದ ಸರಾಸರಿ ದಪ್ಪವನ್ನು 25 ಮಿ.ಮೀ. ಎಂದು ನಮೂದಿಸಲಾಗಿದೆ ಎಂದರೆ ಸರಿ ಎಂದು ಪ್ಯಾಕೇಜ್ 1 ರ ಎಸ್ಟಿಮೇಟ್‌ನಲ್ಲಿ ನಮೂದಿಸಿರುವ ಕಾಮಗಾರಿಯ ಚೈನೇಜ್‌ನ ವಿವರಣೆ ಮತ್ತು ತನಿಖಾ ವರದಿಯಲ್ಲಿ 1ನೇ ಪ್ಯಾಕೇಜ್‌ಗೆ ಸಂಬಂಧಿಸಿದ ಚೈನೇಜ್‌ನ ವಿವರ ತಾಳೆಯಾಗುತ್ತದೆ ಎಂದರೆ ಸರಿ ಎಂದು ಪ್ಯಾಕೇಜ್ 1 ರ ಕಾಮಗಾರಿಯ ಚೈನೇಜ್ ನ್ನು ಹೊರತುಪಡಿಸಿ ಎಂ.ಬಿ.ಪುಸ್ತಕದಲ್ಲಿ ಬೇರೆ ಚೈನೇಜ್‌ನ್ನು ನಮೂದಿಸಿದ್ದಾರೆಯೇ ಎಂದು ಗಮನಿಸಿಲ್ಲವೆಂದು ಒಪ್ಪಿದ್ದಾರೆ. ಆದರೆ ಪ್ರಸ್ತುತ ಪ್ರಕರಣದ ದೋಷಾರೋಪಣೆ ಪಟ್ಟಿಯಲ್ಲಿ ಈ ಬಗ್ಗೆ ಆಪಾದನೆ ಇರುವುದಿಲ್ಲ. ಆದ್ದರಿಂದ ಸಾಕ್ಷಿದಾರರ ಮೇಲೆ ಹೇಳೀದ ಅಂಶವು ಆ.ಸ.ನೌ.ರವರಿಗೆ ಉಪಯೋಗವಾಗುವುದಿಲ್ಲ.

**15.** ಮುಂದುವರೆದು, ಈ ಸಾಕ್ಷಿಯು ಅವರ ವರದಿಯಲ್ಲಿ ಮತ್ತು ನಿ.ಪಿ–1 ರಲ್ಲಿ ಹೇಳಿರುವ ಚೈನೇಜ 41.20 ಕಾಮಗಾರಿಯನ್ನು ಅಂದಾಜುಪಟ್ಟಿಯಲ್ಲಾಗಲಿ ಮತ್ತು ಎಂ.ಬಿ ಪುಸ್ತಕದಲ್ಲಾಗಲೀ ನಮೂದಾಗಿರುವುದು ತನಗೆ ತಿಳಿದುಬಂದಿಲ್ಲವೆಂದು ನುಡಿದಿರುತ್ತಾರೆ, ಮುಂದುವರೆದು ಸದರಿ 41.20 ಚೈನೇಜ್‌ನಲ್ಲಿ ತೆಗೆದ ಪರೀಕ್ಷಾ ಗುಂಡಿ ಪ್ಯಾಕೇಜ್–1 ರ ಅಂದಾಜು ಪಟ್ಟಿಯಿಂದ ಹೊರಗೆ ಬರುತ್ತದೆ ಎಂದರೆ ಸರಿ ಎಂದು ಒಪ್ಪಿರುತ್ತಾರೆ. 41.20 ಚೈನೇಜ ಭಾಗ ಪ್ಯಾಕೇಜ.1ರ ಅಂದಾಜುಪಟ್ಟಿಯಲ್ಲಿ ಇಲ್ಲ ಎಂದು ಗಮನಿಸಿ ಅದರ ಬಗ್ಗೆ ಆಸನೌ ರವರ ವಿವರಣೆ ಕೇಳಿಲ್ಲವೆಂದು

ತಿಳಿಸಿರುತ್ತಾರೆ. ಅಲ್ಲದೇ ಆಪಾದನೆಯಲ್ಲಿ ಚೈನೇಜ್ 41.20 ರಲ್ಲಿ ಯಾವುದೇ ನ್ಯೂನ್ಯತೆಗಳು ಇವೆ ಎಂದು ಆಪಾದಿಸಿರುವುದಿಲ್ಲ. ಆದ್ದರಿಂದ, ಮೇಲೆ ಹೇಳಿದ ಈ ಸಾಕ್ಷಿದಾರರ ಒಪ್ಪಿಗೆ ಅಂಶ ಅಂದರೆ 41.20 ಚೈನೇಜ್‌ನಲ್ಲಿ ತೆಗೆದ ಪರೀಕ್ಷಾ ಗುಂಡಿ ಪ್ಯಾಕೇಜ್–1 ರ ಅಂದಾಜು ಪಟ್ಟಿಯಿಂದ ಹೊರಗೆ ಬರುತ್ತದೆ ಎಂದು ಒಪ್ಪಿದ ಅಂಶ ಆ.ಸ.ನೌ.ರವರಿಗೆ ಅನುಕೂಲವಾಗುವುದಿಲ್ಲ.

**16.** ಈ ಸಾಕ್ಷಿದಾರರಿಗೆ ಆ.ಸ.ನೌ.ರವರ ಪರ ವಕೀಲರು ಬಿಟಮಿನ್ ಅಂಶಗಳನ್ನು ಸ್ಥಳದಲ್ಲಿಯೇ ಉಪಕರಣಗಳನ್ನು ತರಿಸಿಕೊಂಡು ಪರೀಕ್ಷೆ ಮಾಡಬಹುದಾಗಿತ್ತೆಂದು ಪಾಟೀ ಸವಾಲಿನಲ್ಲಿ ಸೂಚಿಸಿದ್ದು, ಆದರೆ ಈ ಸಾಕ್ಷಿದಾರರು ಹಾಗೆ ಪರೀಕ್ಷೆ ಮಾಡಲು ವ್ಯವಸ್ಥೆ ಮತ್ತು ಕಾಲಾವಕಾಶದ ಕೊರತೆ ಇತ್ತು ಎಂದು ನಿರ್ದಿಷ್ಟವಾಗಿ ಹೇಳಿದ್ದಾರೆ. ಅದಲ್ಲದೇ ಪರೀಕ್ಷೆಯನ್ನು ಸ್ಥಳದಲ್ಲಿಯೇ ಮಾಡಬೇಕೆಂದು ನಿಯಮವೇನು ಇಲ್ಲ. ಬದಲಿಗೆ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಮಾಡಿದಲ್ಲಿ ಸೂಕ್ತ ಫಲಿತಾಂಶ ಸಿಗುತ್ತದೆಯಾದ್ದರಿಂದ ಸ್ಥಳದಲ್ಲಿ ಪರೀಕ್ಷೆ ಮಾಡಲಿಲ್ಲವೆಂಬ ಅಂಶ ಯಾವುದೇ ರೀತಿಯಲ್ಲಿ ಆ.ಸ.ನೌ.ರವರಿಗೆ ಅನುಕೂಲವಾಗಿಲ್ಲ.

**17.** ಈ ಸಾಕ್ಷಿದಾರರು ಪರೀಕ್ಷೆಗೆ ಎಸ್.ಡಿ.ಬಿ.ಸಿ. ಯನ್ನು ತೆಗೆದುಕೊಂಡು ಪಾಲಿಥಿನ್ ಕವರ್‌ನಲ್ಲಿ ಆ.ಸ.ನೌ.ರವರ ಸಮಕ್ಷಮ ಸೀಲ್ ಮಾಡಿ ಸಹಿಯನ್ನು ಪಡೆದುಕೊಂಡಿಲ್ಲ ಎಂದು ಒಪ್ಪಿದ್ದಾರೆ. ಆದರೆ ಮಹಜರ್‌ಗೆ ಸಹಿ ಪಡೆದಿರುವುದಾಗಿ ನುಡಿದಿರುತ್ತಾರೆ. ಅಲ್ಲದೇ ಎಸ್.ಡಿ.ಬಿ.ಸಿ. ಯನ್ನು ಕಾಮಗಾರಿ ಸ್ಥಳದಲ್ಲಿ ತೆಗೆದ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ಆದ್ದರಿಂದ, ಕೇವಲ ಪಾಲಿಥಿನ್ ಕವರಿಗೆ ತೆಗೆದ ಎಸ್.ಡಿ.ಬಿ.ಸಿ. ಯನ್ನು ಹಾಕಿ ಸೀಲ್ ಮಾಡಿ ಪಾಲಿಥಿನ್ ಕವರ್ ಮೇಲೆ ಸಹಿ ತೆಗೆದುಕೊಂಡಿಲ್ಲ ಎಂಬ ವಿಚಾರ ಆ.ಸ.ನೌ.ರವರಿಗೆ ಉಪಯೋಗವಾಗುವುದಿಲ್ಲ.

**18.** ಆ.ಸ.ನೌ.ರವರ ಪರ ವಕೀಲರು ಮಾದರಿ ಪರೀಕ್ಷೆಯನ್ನು ಆ.ಸ.ನೌ.ರವರ ಉಪಸ್ಥಿತಿಯಲ್ಲಿ ಮಾಡಿಲ್ಲ ಮತ್ತು ಹಾಗೇ ಪರೀಕ್ಷೆ ಮಾಡುವ ದಿನಾಂಕದ ಮಾಹಿತಿಯನ್ನು ಆ.ಸ.ನೌ.ರವರಿಗೆ ಕೊಟ್ಟಿಲ್ಲ ಎಂಬಂತಹ ವಿಚಾರಗಳನ್ನು

ಸಾಕ್ಷಿದಾರರಿಗೆ ಪಾಟೀ ಸವಾಲಿನಲ್ಲಿ ಸೂಚಿಸಿದ್ದು, ಆದರೆ ಆ ರೀತಿಯ ಪರೀಕ್ಷೆ ಆ.ಸ.ನೌ.ರವರ ಸಮಕ್ಷಮದಲ್ಲಿಯೇ ನಡೆಯಬೇಕಾಗಿತ್ತು ಎಂದು ತೋರಿಸುವ ನಿಯಮಗಳನ್ನು ಹಾಜರುಪಡಿಸಿಲ್ಲ. ಅದಲ್ಲದೇ, ಮಾದರಿ ಎಸ್.ಡಿ.ಬಿ.ಸಿ. ಯನ್ನಲ್ಲದೇ ಬೇರೆ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಲಾಗಿದೆ ಎಂಬುದು ಆ.ಸ.ನೌ.ರವರ ಧೋರಣೆಯಾಗಿರುವುದಿಲ್ಲ. ಆದ್ದರಿಂದ, ಈ ವಿಚಾರ ಅಂದರೆ ಆ.ಸ.ನೌ.ರವರ ಸಮಕ್ಷಮದಲ್ಲಿ ಪರೀಕ್ಷೆ ನಡೆಸದೇ ಇರುವ ವಿಚಾರ ಆ.ಸ.ನೌ.ರವರಿಗೆ ಉಪಯೋಗವಾಗಿರುವುದಿಲ್ಲ.

**19.** ಆ.ಸ.ನೌ.ರವರ ಪರ ವಕೀಲರು ಸಾಕ್ಷಿದಾರರಿಗೆ ಗುಣನಿಯಂತ್ರಣ ವಿಭಾಗದಲ್ಲಿ ಪರೀಕ್ಷೆ ನಡೆಸುವ ಸಂದರ್ಭದಲ್ಲಿ ಮಹಜರ್ ಮಾಡಿಲ್ಲ ಎಂದು ಸೂಚಿಸಿದ್ದು, ಆದರೆ, ಮಹಜರ್ ಮಾಡಬೇಕೆಂಬ ನಿಯಮವಿದೆ ಎಂದು ಆ.ಸ.ನೌ.ರವರು ಸಾಬೀತುಪಡಿಸಿಲ್ಲ. ಅಲ್ಲದೇ ಮೇಲೆ ಹೇಳಿದಂತೆ ತೆಗೆದ ಎಸ್.ಡಿ.ಬಿ.ಸಿ. ಮಾದರಿಯನ್ನಲ್ಲದೇ ಬೇರೆ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಿದ್ದಾರೆ ಎನ್ನುವುದು ಆ.ಸ.ನೌ.ರವರ ಧೋರಣೆಯಾಗಿರುವುದಿಲ್ಲ. ಆದ್ದರಿಂದ, ಎಸ್.ಡಿ.ಬಿ.ಸಿ. ಪರೀಕ್ಷೆ ನಡೆಸಿದಾಗ ಮಹಜರ್ ಮಾಡದೇ ಇರುವ ವಿಚಾರ ಆ.ಸ.ನೌ.ರವರಿಗೆ ಅನುಕೂಲವಾಗಿಲ್ಲ.

**20.** ಆ.ಸ.ನೌ.ರವರ ಪರ ವಕೀಲರು ಎಸ್.ಡಿ.ಬಿ.ಸಿ. ವಿಶ್ಲೇಷಣೆ ಮಾಡುವಾಗ ಸಾಮಾನ್ಯವಾಗಿ ಶೇ.4.5 ರಿಂದ 5 ರಷ್ಟು ವಿನ್ಯಾಸ ಮಿಶ್ರಣ ಹೊರತುಪಡಿಸಿ ಡಾಂಬರಿನ ಪರಿಮಾಣ ಇದ್ದರೆ ಪೂರ್ತಿ ಹಣವನ್ನು ಗುತ್ತಿಗೆದಾರರಿಗೆ ಪಾವತಿ ಮಾಡಲಾಗುತ್ತದೆಯೆಂದು ಮಾಡಿದ ಸೂಚನೆಯನ್ನು ಅಲ್ಲಗಳೆದು, ಹಾಗೇ ಎಸ್.ಡಿ.ಬಿ.ಸಿ. ವಿಶ್ಲೇಷಣೆಯಂತೆ ಡಾಂಬರಿನ ಅಂಶ ಶೇ.4.5 ರಿಂದ 5 ರಷ್ಟು ಇದ್ದ ಮಾತ್ರಕ್ಕೆ ಪೂರ್ತಿ ಹಣ ಪಾವತಿಸಲಾಗುವುದಿಲ್ಲವೆಂದು ಆದರೆ ವಿನ್ಯಾಸ ಮಿಶ್ರಣಕ್ಕೆ ಅನುಗುಣವಾಗಿ ಡಾಂಬರಿನ ಅಂಶವಿದ್ದರೆ ಮಾತ್ರ ಹಣ ಪಾವತಿ ಮಾಡಲಾಗುತ್ತದೆಯೆಂದು ಸ್ಪಷ್ಟಪಡಿಸಿದ್ದಾರೆ. ಈ ಬಗ್ಗೆ ತಾವು ಕರಾರು ಪತ್ರವನ್ನು ನೋಡಿಲ್ಲವೆಂದು ಕರಾರಿನಂತೆ ಗುತ್ತಿಗೆ ಹಣವನ್ನು ಪಾವತಿ ಮಾಡಬೇಕೆಂದು

ಕರಾರಿನಲ್ಲಿ ತಿಳಿಸಿರುವುದನ್ನು ತಾನು ಗಮನಿಸಿಲ್ಲವೆಂದು ಒಪ್ಪಿದ್ದಾರೆ. ಮುಂದುವರೆದು, ಹಣ ಪಾವತಿ ಬಗ್ಗೆ ತನಗೆ ಹೇಳಲು ನೆನಪಿಲ್ಲ. ಆದರೆ ಕಾಮಗಾರಿಗೆ ಸಂಬಂಧಪಟ್ಟಂತೆ ಮಿಶ್ರಣ ವಿನ್ಯಾಸದ ವರದಿ ಪಡೆದು ಪರಿಶೀಲನೆ ಮಾಡಿಲ್ಲ ಎಂದು ಒಪ್ಪಿದ್ದಾರೆ. ಆದರೆ ಪ್ರಕರಣದಲ್ಲಿನ ಆರೋಪಗಳು ಬೇರೆ ಇದ್ದು, ಈ ಅಂಶಗಳು ಆ.ಸ.ನೌ.ರವರಿಗೆ ಯಾವುದೇ ರೀತಿಯಲ್ಲಿ ಅನುಕೂಲವಾಗಿಲ್ಲ.

**21.** ಮುಂದುವರೆದ ಪಾಟೀ ಸವಾಲಿನಲ್ಲಿ ಮಾರ್ಥ್ ಗೈಡ್‌ಲೈನ್ಸ್ ಪ್ರಕಾರ ಪರೀಕ್ಷಾ ಗುಂಡಿಗಳನ್ನು ತೆಗೆದಿಲ್ಲ ಎಂದು ಸೂಚಿಸಿದ್ದು, ಸಾಕ್ಷಿದಾರರು ಕಾಮಗಾರಿಯ ಸ್ಥಳದಲ್ಲಿ ರಸ್ತೆಯ ಯಾವುದೇ ಭಾಗದಲ್ಲಿ ಪರೀಕ್ಷಾ ಗುಂಡಿಗಳಲ್ಲಿ ನಿಗದಿತ ವಿಶಿಷ್ಟ ವಿವರಣೆ ಅನುಸಾರ ಇರಬೇಕಾಗಿದ್ದು, ಈ ಆಧಾರದ ಮೇಲೆ ಗುಂಡಿಗಳನ್ನು ತೆಗೆಯಲಾಗಿದೆ ಎಂದು ವಿವರಣೆ ನೀಡಿದ್ದಾರೆ. ಆ.ಸ.ನೌ.ರವರು ಮಾರ್ಥ್ ಗೈಡ್‌ಲೈನ್ಸ್ ಪ್ರಕಾರವೇ ಪರೀಕ್ಷೆಗಾಗಿ ಗುಂಡಿಗಳನ್ನು ತೆಗೆಯಬೇಕೆಂದು ಸಾಬೀತುಪಡಿಸುವ ದಾಖಲೆಗಳನ್ನು ಅಥವಾ ಇನ್ನಿತರ ಸಾಕ್ಷ್ಯಗಳನ್ನು ನೀಡಿಲ್ಲ. ಮುಂದುವರೆದು, ಈ ಸಾಕ್ಷಿದಾರರು ತಾನು ಸಂಗ್ರಹಿಸಿದ ಬಿಟಮಿನ್ ಅಂಶ ಮತ್ತು ಬಿಟಮಿನ್ ಪದರದ ದಪ್ಪ (ಡಾಂಬರ್ ಪದರದ ದಪ್ಪ) ನ್ನು ವಿಶಿಷ್ಟ ವಿವರಣೆ ಹಾಗೂ ಎಸ್.ಡಿ.ಬಿ.ಸಿ ಅಂಶದ ಅಳತೆಗಳನ್ನು ಅಳತೆಪುಸ್ತಕದಲ್ಲಿ ದಾಖಲಿಸಿದ ಅಳತೆಗೆ ಅನುಗುಣವಾಗಿ ಹೋಲಿಕೆ ಮಾಡಲಾಗುತ್ತದೆ ಎಂದರೆ ಸರಿ ಎಂದು ಒಪ್ಪಿದ್ದಾರೆ. ಆದರೆ ಈ ಒಪ್ಪಿಗೆ ಅಂಶ ಯಾವ ರೀತಿ ಆ.ಸ.ನೌ.ರವರಿಗೆ ಉಪಯೋಗವಾಗುತ್ತದೆ ಎಂದು ವಿವರಿಸಿಲ್ಲ.

**22.** ಮುಂದುವರೆದು, ಚೈನೇಜ್ 40.60 ರಿಂದ 41.60 ನ್ನು ಅಂದಾಜು ಪಟ್ಟಿಯಲ್ಲಿ ನಮೂದಿಸಿಲ್ಲ ಎಂದರೆ ಸರಿ ಎಂದು ಒಪ್ಪಿದ್ದಾರೆ. ಹಾಗೇ ಎಂ.ಬಿ.ಪುಸ್ತಕದಲ್ಲಿ ಈ ಚೈನೇಜ್‌ನ್ನು ಬರೆದಿಲ್ಲ ಎಂದು ಸಹ ಒಪ್ಪಿದ್ದಾರೆ. ಆದರೆ ಮೇಲೆ ಹೇಳಿದಂತೆ, ಆಪಾದನೆಯಲ್ಲಿ ಈ ಚೈನೇಜ್‌ನಲ್ಲಿ ನ್ಯೂನ್ಯತೆ ಇದೆ ಎಂದು ಆಪಾದಿಸಿಲ್ಲ. ಆದ್ದರಿಂದ, ಈ ಅಂಶವು ಸಹ ಆ.ಸ.ನೌ.ರವರಿಗೆ ಅನುಕೂಲವಾಗಿಲ್ಲ.

**23.** ಒಂದು ಗುಂಡಿಯ ಮಾದರಿಯನ್ನು ತೆಗೆದು ಡಾಂಬರಿನ ಅಂಶವನ್ನು ಪರಿಶೀಲಿಸಿದಾಗ ಡಾಂಬರಿನ ಅಂಶವು 0.3 ಅಥವಾ .03 % ವ್ಯತ್ಯಾಸವು ಇರಬಹುದು

ಎಂದು ಮಾರ್ಥ್ ಗೈಡ್‌ಲೈನ್‌ನಲ್ಲಿ ಹೇಳಿದೆ ಎಂದು ಸೂಚಿಸಿದ್ದು, ತಾನು ಮಾರ್ಥ್ ಗೈಡ್‌ಲೈನ್‌ನ್ನು ನೋಡಿಲ್ಲ ಎಂದು ಸಾಕ್ಷಿದಾರರು ಹೇಳಿದ್ದಾರೆ. ಆದರೆ ಮಾರ್ಥ್ ಗೈಡ್‌ಲೈನ್‌ನಲ್ಲಿ ಎಲ್ಲಿ ಹೇಳಿದ್ದಾರೆಂದು ಆ.ಸ.ನೌ.ರವರು ತೋರಿಸಿಲ್ಲ. ಮುಂದುವರೆದು, ಎಸ್.ಡಿ.ಬಿ.ಸಿ. ಕ್ವಾಂಟಿಟಿಯಲ್ಲಿ ಬಿಟಮಿನ್ ಪರಿಮಾಣವನ್ನು ಲೆಕ್ಕಚಾರ ಮಾಡುವಾಗ ಶೇ.5 ನ್ನು ಗಣನೆಗೆ ತೆಗೆದುಕೊಂಡಿದ್ದೇನೆ ಎಂದು ಸರಾಸರಿ ಶೇ.4.5 ರಿಂದ 4.75 ನ್ನು ಪರಿಗಣಿಸಿಲ್ಲವೆಂದು ಒಪ್ಪಿದ್ದಾರೆ. ಆದರೆ ಸರಾಸರಿ ಶೇ. 4.5 ರಿಂದ 4.75 ರ ಪರಿಮಾಣವನ್ನು ಪರಿಗಣಿಸದೇ ಇರುವುದರಿಂದ ಆ.ಸ.ನೌ.ರವರಿಗೆ ಹೇಗೆ ಅನಾನುಕೂಲವಾಗಿದೆ ಎಂಬುದರ ವಿವರಣೆಯನ್ನು ಆ.ಸ.ನೌ.ರವರು ಪ್ರತಿವಾದ ಪತ್ರದಲ್ಲಾಗಲೀ ಅಥವಾ ಪಾಟೀ ಸವಾಲಿನಲ್ಲಾಗಲೀ ಅಥವಾ ಲಿಖಿತ ವಾದ ಪತ್ರದಲ್ಲಾಗಲೀ ತಿಳಿಸಿಲ್ಲ.

**24.** ಮುಂದುವರೆದು ಈ ಸಾಕ್ಷಿದಾರರು ಜೆಲ್ಲಿಯ ಸಾಂದ್ರತೆಗೆ ಅನುಗುಣವಾಗಿ ಬಿಟಮಿನ್ (ಡಾಂಬರ್) ಪ್ರಮಾಣ ಇರುತ್ತದೆ ಎಂದು, ಸಾಂದ್ರತೆಯ ಅಂಶವನ್ನು ತಾನು ಪರಿಗಣಿಸಿಲ್ಲವೆಂದು ಒಪ್ಪಿದ್ದಾರೆ. ಆದರೆ, ಸಾಂದ್ರತೆಯ ಅಂಶವನ್ನು ಪರಿಗಣಿಸುವ ಅವಶ್ಯಕತೆ ಇಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಜೆಲ್ಲಿಯ ಸಾಂದ್ರತೆಯನ್ನು ಪರಿಗಣಿಸುವ ಅವಶ್ಯಕತೆ ಇತ್ತು ಎಂದು, ಸಾಕ್ಷಿದಾರರು ಜೆಲ್ಲಿಯ ಸಾಂದ್ರತೆಯನ್ನು ಪರಿಗಣಿಸದೆ ಇದ್ದುದ್ದರಿಂದ ಫಲಿತಾಂಶ ಎದುರುದಾರರ ವಿರುದ್ಧವಾಗಿ ಬಂದಿದೆ ಎಂದು ತೋರಿಸುವ ಸಾಕ್ಷ್ಯಾಧಾರಗಳನ್ನು ಎದುರುದಾರರು ಹಾಜರುಪಡಿಸಿಲ್ಲ. ಅಲ್ಲದೆ, ಸಾಕ್ಷಿದಾರರು ಕಾಮಗಾರಿಯ (ದರಪಟ್ಟಿ) ಶೆಡ್ಯೂಲ್ ಆಪರೇಟ್ಸ್ ನಲ್ಲಿ ಎಸ್.ಡಿ.ಬಿ.ಸಿ ಡಾಂಬರಿನ ಪರಿಮಾಣವನ್ನು ನಮೂದಿಸಿದುದ್ದರ ಆಧಾರದ ಮೇಲೆ ತಾನು ನಿ.ಪಿ.–3 ಅನುಬಂದ–1 ರಲ್ಲಿ ನಮೂದಿಸಿರುತ್ತೇನೆಂದು ಸ್ಪಷ್ಟಪಡಿಸಿದ್ದಾರೆ.

**25.** ಮುಂದುವರೆದು, ನಿ.ಪಿ–3 ರ ಅನೆಕ್ಷರ್–1 ರಲ್ಲಿ ಕಾಲಂ 6 ರಲ್ಲಿ ಹೇಳಿರುವ 3 ಮಾದರಿಗಳ ಸರಾಸರಿ ಮಾಡಿದರೆ ಶೇ. 4.96 ರಷ್ಟು ಬರುತ್ತದೆ ಎಂದರೆ ಅದನ್ನು ತಾನು ಪರಿಗಣಿಸಿಲ್ಲವೆಂದು ಹೇಳಿದ್ದಾರೆ. ಆದರೆ 3 ಮಾದರಿಯನ್ನು

ಸರಾಸರಿ ಮಾಡಿ ಫಲಿತಾಂಶ ಪಡೆಯಬೇಕೆಂಬ ನಿಯಮವಿರುವ ಬಗ್ಗೆ ಆ.ಸ.ನೌ.ರವರು ತಿಳಿಸಿಲ್ಲ.

**26.** ಮುಂದುವರೆದು, ನಷ್ಟದ ಹಣ ಲೆಕ್ಕಚಾರ ಮಾಡುವಾಗ ಗುತ್ತಿಗೆದಾರರ ದರವನ್ನು ಪರಿಗಣಿಸಿಲ್ಲವೆಂದು ಸೂಚಿಸಿದ್ದು, ಆದರೆ ಸಾಕ್ಷಿದಾರರು ಸ್ಪಷ್ಟವಾಗಿ ಎಸ್.ಆರ್. ರೇಟ್‌ನ್ನು ಪರಿಗಣಿಸಿದ್ದೇನೆ ಎಂದು ಸ್ಪಷ್ಟ ಪಡಿಸಿದ್ದಾರೆ. ಹಾಗೇ ಕೆ.ಪಿ.ಡಬ್ಲ್ಯೂ.ಎ. ಕೋಡ್ ಪ್ಯಾರಾ 209(ಎ) ಮತ್ತು ಕೆ.ಪಿ.ಡಬ್ಲ್ಯೂ.ಡಿ. ಕೋಡ್ ವಾಲ್ಯೂಮ್–2 ಪ್ಯಾರಾ 301 ರಲ್ಲಿ ಆರ್ಥಿಕ ಹೊಣೆಯ ವಿಭಜನೆಯನ್ನು ಮಾಡುವುದಕ್ಕೆ ಅವಕಾಶವಿರುವುದಿಲ್ಲ ಎಂಬ ಸೂಚನೆಯನ್ನು ಅಲ್ಲಗಳೆದಿದ್ದಾರೆ.

**27.** ಚೈನೇಜ್ –63.650ಯ ಎಡಭಾಗ ಚೈನೇಜ್–44.090ಯ ಬಲಭಾಗದಲ್ಲಿ ತೆಗೆದ ಗುಂಡಿಗಳ ಉದ್ದ X ಅಗಲ ವನ್ನು ಮಾತ್ರ ಮಹಜರ್ ನಲ್ಲಿ ತಿಳಿಸಿದ್ದು, ಆಳವನ್ನು ತಿಳಿಸಿಲ್ಲವೆಂದು ಒಪ್ಪಿದ್ದಾರೆ. ಆದರೆ, 175 ಮಿ.ಮೀ. ನಷ್ಟು ಆಳ ತೆಗೆಯಬೇಕೆಂದು ತಿಳಿಸಿದ್ದು ಅಳತೆಗೆ ಅನುಗುಣವಾಗಿ ಆಳತೆಗೆದಿದ್ದೇನೆಂದು ಹೇಳಿದ್ದಾರೆ. ಈ ಬಗ್ಗೆ ವಿಡಿಯೋ ಚಿತ್ರೀಕರಣ ಮಾಡಿದ್ದು, ಆದರೆ, ಸಿ.ಡಿ. ಕಡತದಲ್ಲಿ ಇಲ್ಲವೆಂದು ಒಪ್ಪಿದ್ದಾರೆ. ಆದರೆ, ಇಲ್ಲಿ ಸಾಕ್ಷಿದಾರರು 175 ಮಿ.ಮೀ., ಆಳದಿಂದ ಮಾಧರಿಯನ್ನು ಸಂಗ್ರಹಿಸಿಲ್ಲವೆಂದು, ಆದ್ದರಿಂದ ಪರೀಕ್ಷಾ ಫಲಿತಾಂಶ ಸರಿಯಾಗಿ ಬಂದಿಲ್ಲವೆಂದು ಪ್ರತಿವಾದ ಪತ್ರದಲ್ಲಿ ಪ್ರತಿಪಾದಿಸಿಲ್ಲ. ಅಲ್ಲದೆ, 175ಮಿ.ಮೀ., ಗಿಂತ ಕಡಿಮೆ ಆಳದಲ್ಲಿ ಮಾಧರಿ ಸಂಗ್ರಹಿಸಿದ್ದಾರೆಂದು, ಆದ್ದರಿಂದ ಸರಿಯಾದ ಫಲಿತಾಂಶ ಬಂದಿಲ್ಲವೆಂದು ತಿಳಿಸುವ ಸಾಕ್ಷ್ಯಾಧಾರಗಳನ್ನು ಎದುರುದಾರರು ಹಾಜರುಪಡಿಸಿಲ್ಲ.

**28.** ಆದ್ದರಿಂದ ಸಿ.ಡಿಯಲ್ಲಿ ಮಾದರಿ ತೆಗೆದ ಪ್ರಕ್ರಯೆ ಇಲ್ಲದೆ ಇರುವುದು ಎದುರುದಾರರಿಗೆ ಅನುಕೂಲವಾಗಿಲ್ಲ.

**29.** ಈ ಸಾಕ್ಷಿದಾರರು, ಮುಂದುವರೆದು, ನಿ.ಪಿ.–4ರ ಅನುಬಂಧ–1 ರಲ್ಲಿ ತೋರಿಸಿರುವ ಮೆಟಲಿಂಗ್ ತೂಕ ಸಾಂದ್ರತೆಗೆ ಅನುಗುಣವಾಗಿ ಪರಿಮಾಣವನ್ನು ಕಂಡುಹಿಡಿಯಲು ಬಳಸಿರುವ ಕಾನ್ಸಟಂಟ್ ವ್ಯಾಲ್ಯು 1.21 ಎಂದು ತಪ್ಪಾಗಿ ಪರಿಗಣಿಸಿದ್ದು ಅದರ ಬದಲಾಗಿ 0.91ಅನ್ನು ಪರಿಗಣಿಸಬೇಕಾಗಿತ್ತು ಎಂದು

ಎದುರುದಾರರ ವಕೀಲರು ಸೂಚಿಸಿದ್ದನ್ನು ಅಲ್ಲಗಳೆದಿದ್ದಾರೆ. ಹಾಗೇ ಪ್ಯಾಕೇಜ್-2 ಕಾಮಗಾರಿಯಲ್ಲಿ ಡಬ್ಲೂಬಿಎಂ ಪದರದ ಗಾತ್ರ ಗ್ರೇಡ್-2.75 ಮೀ.ಮೀ ಮತ್ತು ಗ್ರೇಡ್-3 75 ಮೀ.ಮೀ ಇರಬೇಕೆಂದು ತಿಳಿಸಿರುತ್ತಾರೆಂದರೆ ಸರಿ ಎಂದು ಒಪ್ಪಿದ್ದಾರೆ. ಎಂ ಬಿ ಪುಸ್ತಕದಲ್ಲಿ ಸರಾಸರಿ ಎರಡು ಪದರುಗಳು ಸೇರಿ 130 ಮಿ.ಮಿ ಇದ್ದುದ್ದನ್ನು ಪರಿಗಣಿಸಿ ಜೆಲ್ಲಿಯ ತೋಕವನ್ನು ನಿರ್ಧರಿಸಿದ್ದೇನೆ ಎಂದು ತಿಳಿಸಿದ್ದಾರೆ. ಆದರೆ, ನಿಪಿ.4ರಲ್ಲಿ ಕಾಂನ್ಸ್‌ಟಂಟ್ ವ್ಯಾಲ್ಯು ತಪ್ಪಾಗಿ ತೆಗೆದುಕೊಂಡಿದ್ದರಿಂದ ತಾನು ಮಾಡಿರುವ ಲೆಕ್ಕಾಚಾರವು ತಪ್ಪಾಗಿದೆ ಎಂಬುದನ್ನು ಸ್ಪಷ್ಟವಾಗಿ ಅಲ್ಲಗಳೆದಿದ್ದಾರೆ. ಒಟ್ಟಾರೆ, ಎದುರುದಾರರು ಸಾಕ್ಷಿದಾರರು ನಿ.ಪಿ-4 ರಲ್ಲಿ ಕಾಂನ್ಸ್‌ಟಂಟ್ ವ್ಯಾಲ್ಯು ಅನ್ನು ತಪ್ಪಾಗಿ ತೆಗೆದುಕೊಂಡಿದ್ದಾರೆಂದು ಅದರಿಂದ ಲೆಕ್ಕಾಚಾರ ತಪ್ಪಾಗಿದೆ ಎಂದು ಸಾಬೀತುಪಡಿಸಿಡುವ ಸಾಕ್ಷ್ಯಾದರವನ್ನು ಹಾಜರುಪಡಿಸಿಲ್ಲ.

**30.** ಮುಂದುವರೆದು ಈ ಸಾಕ್ಷಿದಾರರು ರಸ್ತೆಯ ಅಲಗವನ್ನು ಪರಿಶೀಲಿಸಿದ್ದೇನೆ ಆದರೆ ಉದ್ದವನ್ನು ಪರಿಶೀಲಿಸಿಲ್ಲ ಎಂದು ಹೇಳಿದ್ದಾರೆ. ಆದರೆ, ಉದ್ದವನ್ನು ಪರಿಶೀಲಿಸದೆ ಇರುವುದರಿಂದ ಎದುರುದಾರರಿಗೆ ಹೇಗೆ ಅನುಕೂಲವಾಗಿದೆ ಎಂಬುದನ್ನು ಎದುರುದಾರರು ಪ್ರತಿಪಾದಿಸಿಲ್ಲ.

**31.** ಈ ಸಾಕ್ಷಿದಾರರು ಮುಂದುವರೆದು ಕಾಮಗಾರಿಯಲ್ಲಿ ಗ್ರೇಡ್-2 ಮತ್ತು 3 ಜೆಲ್ಲಿಯನ್ನು ಬಳಸಲಾಗಿದೆ ಎಂದು ಗ್ರೇಡ್-1 ಜೆಲ್ಲಿಯನ್ನು ಬಳಸಲಾಗಿಲ್ಲವೆಂದು ಗ್ರೇಡ್-2 ಮತ್ತು ಗ್ರೇಡ್-3ರಲ್ಲಿ ಸರಾಸರಿ ತೂಕ ಎಷ್ಟು ಇತ್ತು ಎಂದು ಪ್ರತ್ಯೇಕವಾಗಿ ಹೇಳಲಾಗುವುದಿಲ್ಲವೆಂದು ಹೇಳಿದ್ದಾರೆ. ಆದರೆ, ಗ್ರೇಡ್-2 ಮತ್ತು 3 ಒಂದರೊಳಗೆ ಒಂದು ಸೇರಿಕೊಂಡಿದ್ದರಿಂದ ಮತ್ತು ಒಂದೇ ರೀತಿಯ ಸಾಮಗ್ರಿಗಳಾಗಿರುವುದರಿಂದ ಬೇರ್ಪಡಿಸಲು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ.

**32.** ಮುಂದುವರೆದು ಸಾಕ್ಷಿದಾರರು ಮಾರ್ತ್ ಗೈಡಲೈನ್ಸ್ ನಂತೆ ಮಾದರಿಗಳನ್ನು ಸಂಗ್ರಹಿಲ್ಲವೆಂದು ಒಪ್ಪಿದ್ದಾರೆ. ಆದರೆ, ಕಾಮಗಾರಿಯ ಸ್ಥಳದಲ್ಲಿ ರಸ್ತೆಯ ಯಾವುದೇ ಭಾಗದಲ್ಲಿ ಪರೀಕ್ಷಾ ಗುಂಡಿಗಳಲ್ಲಿ ನಿಗಧಿತ ವಿಶಿಷ್ಟವಿವರಣೆ ಅನುಸಾರ ಸಾಮಗ್ರಿಗಳು ಇರಬೇಕಾಗಿದ್ದು, ಇದರ ಆಧಾರದ ಮೇಲೆ ಗುಂಡಿಗಳನ್ನು

ತೆಗೆಯಲಾಗಿದೆ ಎಂದು ಸ್ಪಷ್ಟ ಪಡಿಸಿದ್ದಾರೆ ಹಾಗೆ ಮಾರ್ತ್ ಗೈಡಲೈನ್ಸ್ ಪ್ರಕಾರ ಮಾಧರಿ ಸಂಗ್ರಹಿಸುವ ಗುಂಡಿಗಳನ್ನು ತೆಗೆದು ಸರಾಸರಿ ಅಳವಡಿಸಿದ್ದರೆ ನಿಪಿ.4ರಲ್ಲಿ ಹೇಳಿರುವ ನ್ಯೂನ್ಯತೆಗಳು ಕಂಡುಬರುತ್ತೀರಲಿಲ್ಲ ಎಂದು ಸೂಚಿಸಿದ್ದನ್ನು ಸ್ಪಷ್ಟವಾಗಿ ಅಲ್ಲಗಳೆದಿದ್ದು, ಎದುರುದಾರರು ಮಾಧರಿ ಗುಂಡಿಗಳಲ್ಲಿ ಸಂಗ್ರಹಿಸಿದ ಎಸ್.ಡಿ.ಬಿ.ಸಿಯನ್ನು ಸರಾಸರಿ ಅಳವಡಿಸಿ ಪರೀಕ್ಷೆಗೆ ಒಳಪಡಿಸಬೇಕೆಂಬ ನಿಯಮ ಇತ್ತು ಎಂದು ತೋರಿಸುವ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸಿಲ್ಲ.

**33.** ಈ ಸಾಕ್ಷಿ ಮುಂದುವರೆದು ತಾನು ಆ.ಸ.ನೌಕರರ ಮೇಲೆ ಆರ್ಥಿಕ ಹೊಣೆಗಾರಿಕೆಯನ್ನು ತಪ್ಪಾಗಿ ಹೊರಿಸಿದ್ದೇನೆಂದು, ಕೆ.ಪಿ.ಡಬ್ಲ್ಯು ಎ ಕೋಡ್ ಪ್ಯಾರಾ 209(ಎ) ಮತ್ತು ಕೆ.ಪಿ.ಡಬ್ಲ್ಯು.ಡಿ ಡಿ ಕೋಡ ವಾಲುಮ್-2 ಪ್ಯಾರಾ 301ರಲ್ಲಿ ಆರ್ಥಿಕ ಹೊಣೆಯ ವಿಭಜನೆಯನ್ನು ಮಾಡುವುದಕ್ಕೆ ಅವಕಾಶ ಇರುವುದಿಲ್ಲ ಎಂದು ಮಾಡಿದ ಸೂಚನೆಯನ್ನು ಸ್ಪಷ್ಟವಾಗಿ ಅಲ್ಲಗಳೆದಿದ್ದಾರೆ.

**34.** ಈ ಸಾಕ್ಷಿದಾರರು ಮುಂದುವರೆದು ಪ್ಯಾಕೇಜ್ 1 ಮತ್ತು 2ಕ್ಕೆ ಸಂಬಂಧಪಟ್ಟ ಕರಾರು ಮತ್ತು ಕರಾರಿನ ಷರತ್ತುಗಳನ್ನು ನೋಡಿಲ್ಲವೆಂದು ನುಡಿದಿದ್ದಾರೆ, ಹಾಗೆ, ಸದರಿ ಕರಾರು ಪ್ರಕಾರ ಗುತ್ತಿಗೆದಾರರಿಗೆ ಗುತ್ತಿಗೆ ಹಣವನ್ನು ಪಾವತಿಸುವ ಸಂದರ್ಭದಲ್ಲಿ, ಕಡಿಮೆ ಪ್ರಮಾಣದ ಕೆಲಸವನ್ನು ಮಾಡಿರುವುದು ಕಂಡುಬಂದಲ್ಲ, ಗುತ್ತಿಗೆದಾರರಿಂದ ಮೊತ್ತವನ್ನು ವಸೂಲಿ ಮಾಡಬಹುದು ಮತ್ತು ಗುತ್ತಿಗೆದಾರರಿಂದಲೇ ಕಾಮಗಾರಿಯನ್ನು ಸರಿಪಡಿಸಬಹುದು ಎಂಬ ಅಂಶ ತನಗೆ ಗೊತ್ತಿಲ್ಲವೆಂದು ನುಡಿದಿದ್ದಾರೆ. ಆದರೆ, ಯಾವ ನಿಯಮಾವಳಿಗಳನ್ನೂ ಪಾಲಿಸದೇ ಆಸನೌ ರ ವಿರುದ್ಧ ತನ್ನ ವರದಿಯಲ್ಲಿ ಆರ್ಥಿಕ ಹೊಣೆಗಾರಿಕೆಯನ್ನು ಹೊರಸಿದ್ದಾರೆ ಎಂದು ಮಾಡಿದ ಸೂಚನೆಯನ್ನು ಅಲ್ಲಗಳೆದಿದ್ದಾರೆ. ಹಾಗೆ ಕಾಮಗಾರಿಗೆ ಸಂಬಂಧಪಟ್ಟಂತೆ ಗುತ್ತಿಗೆದಾರರಿಂದ ಪಡೆದುಕೊಂಡ ಕರಾರು ಮತ್ತು ಕರಾರಿನ ಷರತ್ತುಗಳ ಪ್ರಕಾರ ಆಸನೌ ರವರು ಕಾಮಗಾರಿಯನ್ನು ಪೂರ್ಣಗೊಳಿಸಬೇಕು ಎಂದು ಮಾಡಿದ ಸೂಚನೆಯನ್ನು ಒಪ್ಪಿದ್ದಾರೆ.

**35.** ಹಾಗೇ ಆಸನೌ ರವರು ಗುತ್ತಿಗೆದಾರರೊಂದಿಗೆ ಮಾಡಿಕೊಂಡ ಕಾರಾರು ಮತ್ತು ಕರಾರಿನ ಷರತ್ತಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸಿದರೂ ಸಹ, ಸದರಿ ಕಾಮಗಾರಿಯಲ್ಲಿ ಯಾವುದೆ ನ್ಯೂನ್ಯತೆಗಳು ಕಂಡುಬರೆದೆ ಇದ್ದರೂ ಸಹ, ಆಸನೌ ರವರ ವಿರುದ್ದ ಸುಳ್ಳು ವರದಿ ನೀಡಿದ್ದಾರೆ ಎಂದು ಮಾಡಿದ ಸೂಚನೆಯನ್ನು ಅಲ್ಲಗಳೆದಿದ್ದಾರೆ. ಆದರೆ, ಪ್ರಸ್ತುತ ಪ್ರಕರಣದಲ್ಲಿ ಆ.ಸ.ನೌ–1 ರಿಂದ 3 ಮತ್ತು 5 ರವರು ಸರ್ಕಾರಿ ನೌಕರರಾಗಿ ಮೇಲೆ ಹೇಳಲಾದ ಕಾಮಗಾರಿಯಲ್ಲಿ ಬಳಸಲಾದ ಸಾಮಗ್ರಿಗಳಲ್ಲಿ ಕೊರತೆ ಇದೆ ಎಂದು ಈ ಕೊರತೆಗೆ ಎದುರುದಾರರು ಜವಾಬ್ದಾರರು ಎಂದು ಆರೋಪಿಸಲಾಗಿದ್ದು, ಈ ಹಣವನ್ನು ಗುತ್ತಿಗೆದಾರರಿಂದ ಇಂತಹ ಸಂದರ್ಭದಲ್ಲಿ ವಸೂಲಿ ಮಾಡಬಹುದು ಎಂದು ತಿಳಿಯಪಡಿಸುವ ನಿಯಮಗಳನ್ನು ಉಲ್ಲೇಖಿಸುವ ಪುರಾವೆಯನ್ನು ಹಾಜರುಪಡಿಸಿಲ್ಲ. ಆದ್ದರಿಂದ ಸಾಕ್ಷೀದಾರರು ಮೇಲೆ ಹೇಳಿರುವ ಸಾಕ್ಷ್ಯದ ಒಪ್ಪಿಗೆ ಅಂಶಗಳು ಎದುರುದಾರರಿಗೆ ಅನುಕೂಲವಾಗಿಲ್ಲ.

**36.** ಆ.ಸ.ನೌ–2 ,4 ಮತ್ತು 5 ರವರ ಪರ ವಕೀಲರು ಮಾಡಿದ ಪಾರ್ಟಿಸವಾಲಿನಲ್ಲಿ ಸಾಕ್ಷೀದಾರರು ಸಂಗ್ರಹಿಸಿದ ಮಾಧರಿಯನ್ನು ಗುಣನಿಯಂತ್ರಣ ಉಪವಿಭಾಗ, ಗುಲ್ಬರ್ಗಾ ರವರಿಗೆ ಪರಿಕ್ಷೆಗಾಗಿ ಕಳುಹಿಸಿಲ್ಲ ಎಂದು ಸೂಚಿಸಿದ್ದು, ಸಾಕ್ಷಿದಾರರು ಒಪ್ಪಿದ್ದಾರೆ. ಆದರೆ, ಈ ಹಿಂದೆ ಅಂದರೆ, ಕಾಮಗಾರಿಯನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ ಗುಣನಿಯಂತ್ರಣ ವಿಭಾಗ ಗುಲ್ಬರ್ಗಾದವರೆ ಪರೀಕ್ಷೆ ಕೈಗೊಂಡಿದ್ದರಿಂದ ಅವರಿಗೆ ಪುನಃ ಪರೀಕ್ಷೆ ಮಾಡಲು ಕೊಟ್ಟಿಲ್ಲವೆಂದು ಸ್ಪಷ್ಟ ಪಡಿಸಿದ್ದಾರೆ. ಹಾಗೇ ಬಿಟಮಿನ್ ಬೈಂಡರ್ ಕಂಟೆಟ್ಸ್‌ನ ಗುಣಮಟ್ಟದ ಬಗ್ಗೆ ಸ್ಥಳದಲ್ಲೇ ಪರೀಕ್ಷೆ ಮಾಡಬಹುದಿತ್ತು ಎಂದು ಮಾಡಿದ ಸೂಚನೆಗೆ ಸಮಯಾವಕಾಶ ಇರಲಿಲ್ಲವೆಂದು ಸ್ಪಷ್ಟೀಕರಣ ನೀಡಿದ್ದಾರೆ.

**37.** ಸಾಕ್ಷಿಮುಂದುವರೆದು ತನ್ನ ವರದಿಯಲ್ಲಿ ಗ್ರೇಡ್–2 & ಗ್ರೇಡ್–3 ಮೆಟಲ್ ಬಗ್ಗೆ ಕೆ.ಜಿ. ಲೆಕ್ಕದಲ್ಲಿ ಹೇಳಿದ್ದು, ಅಂದಾಜು ಪಟ್ಟಿಯಲ್ಲಿ ಸದರಿ ಮೆಟಲ್ ಗಳನ್ನು ಕೆ.ಜಿ. ಲೆಕ್ಕದಲ್ಲಿ ಹೇಳಿಲ್ಲ, ಅಲ್ಲಿ ಕ್ಯೂಬಿಕ್ ಮೀಟರ್ ಲೆಕ್ಕದಲ್ಲಿ ಹೇಳಿದ್ದಾರೆ. ಕ್ಯೂಬಿಕ್ ಮೀಟರನ್ನು ಎಲ್.ಬಿ.ಡಿ. (ಎತ್ತರ, ಅಗಲ ಮತ್ತು ಆಳ) ರಲ್ಲಿ ಹೇಳಿದ್ದಾರೆ.

75 ಎಂ.ಎಂ. ಎಂದು ಬರೆದಿರುವುದು ಮೆಟಲ್‌ಗಳ ದಪ್ಪದ ಆಧಾರದ ಮೇಲೆ ಎಂದು, ತಾವು ಪರೀಕ್ಷೆ ಮಾಡುವಾಗ ಜಲ್ಲಿಯ ಘಟ್ಟಣೆಯನ್ನು (ಕಾಂಪಾಕ್ಟ್) ಗ್ರಾವೆಲ್/ಚಿಪ್ಸ್-ಎ ಅಥವಾ ಚಿಪ್ಸ್-ಬಿ ಮಾದರಿಗಳೊಂದಿಗೆ ಬೆರೆಸಿ ಮಾಡಿರುವುದರಿಂದ ಕೇವಲ ದಪ್ಪ ತೆಗೆದರೆ ಮಾತ್ರ ಜಲ್ಲಿಯ ಪರಿಮಾಣವನ್ನು ಪರೀಕ್ಷೆಗೆ ಒಳಪಡಿಸಲಾಗುವುದಿಲ್ಲ. ಹಾಗಾಗಿ ಉಪಯೋಗಿಸಲಾದ ಜಲ್ಲಿಯ ಸಾಂದ್ರತೆಯ ಆಧಾರದ ಮೇಲೆ ಪಿಟ್ಟಿನಲ್ಲಿ ದೊರಕಲಾದ ಜಲ್ಲಿಯ ಪರಿಮಾಣವನ್ನು ಅಸೆಸ್ ಮಾಡಿ ಈ ಆಧಾರದ ಮೇಲೆ ನ್ಯೂನ್ಯತೆಯನ್ನು ಪರಿಗಣಿಸಲಾಗಿದೆ. ಮೆಟಲ್‌ನ್ನು ಕೆ.ಜಿ. ಆಧಾರದ ಮೇಲೆ ಲೆಕ್ಕ ಹಾಕಲು ಮೋರ್ಥ್ ನಲ್ಲಿ ಇರುವುದಿಲ್ಲ. ಆದರೆ ಈ ಬಗ್ಗೆ ವಿವರಣೆ ಕೊಟ್ಟಿದ್ದೇನೆ ತಾನು ಮೇಲೆ ಹೇಳಿದ ವಿವರಣೆಗೆ ಸಂಬಂಧಪಟ್ಟಂತೆ ಪರೀಕ್ಷೆ ಕೈಗೊಳ್ಳಬೇಕೆಂದು ಯಾವುದೇ ನಿಗದಿತವಾದ ನಿಯಮ ಮೋರ್ಥ್ ಅಲ್ಲಿ ಇಲ್ಲ. ಹಾಗೇ ಐ.ಆರ್.ಸಿ.ಯಲ್ಲಿಯೂ ಸಹ ಇಲ್ಲ. ಜನರಲ್ ಪ್ರಾಕ್ಟೀಸ್‌ನ ಪ್ರಕಾರ ಜಲ್ಲಿಯ ಸಾಂದ್ರತೆಯನ್ನು ಆಧರಿಸಿ ಪಿಟ್ಟಿನಲ್ಲಿರುವ ಜಲ್ಲಿಯ ಪರಿಮಾಣವನ್ನು ಪರಿಗಣಿಸಿ ಅದರಂತೆ ನ್ಯೂನ್ಯತೆಯನ್ನು ನಾನು ಲೆಕ್ಕಾಚಾರ ಮಾಡಿದ್ದೇನೆ ಎಂದು ತಿಳಿಸಿದ್ದು. ಒಟ್ಟಾರೆ ಮೋರ್ತ್ ಪ್ರಕಾರ ಮಾಧರಿಯನ್ನು ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸುವ ಅವಶ್ಯಕತೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದು ಎದುರುದಾರರು ಮೋರ್ತ್ ಗೈಡ್‌ಲೈನ್ಸ್ ಪ್ರಕಾರವೇ ಮಾಧರಿಯನ್ನು ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸುವ ಅವಶ್ಯಕತೆ ಇತ್ತು ಎಂದು ಸಾಬೀತುಪಡಿಸುವ ಸಾಕ್ಷ್ಯಾಧರವನ್ನು ನೀಡಿಲ್ಲ.

**38**. ಸಾಕ್ಷಿ ಮುಂದುವರೆದು, ಜೆಲ್ಲಿಯ ದಪ್ಪವನ್ನು ಕ್ಯೂಬಿಕ್ ಮೀಟರ್ ನಲ್ಲಿ ಹೇಳಬೇಕೆಂದು ದಿ: 6.4.2009ರಲ್ಲಿನ ಸರ್ಕಾರದ ಸುತ್ತೋಲೆ ಇದೆ ಎಂದು ಮಾಡಿದ ಸೂಚನೆಯನ್ನು ಅಲ್ಲಗಳೆದು ತಾನು ಆ ಸುತ್ತೋಲೆಯನ್ನು ನೋಡಿಲ್ಲವೆಂದು ತಿಳಿಸಿದ್ದಾರೆ. ಎದುರುದಾರರು ಸದರಿ ಸುತ್ತೋಲೆಯನ್ನು ಹಾಜರುಪಡಿಸಿಲ್ಲ. ಅಲ್ಲದೆ, ಇಲ್ಲಿ ಡಾಂಬರಿನ ಸಾಂದ್ರತೆಯಲ್ಲಿ ನ್ಯೂನ್ಯತೆ ಇದೆ ಎಂದು ಆರೋಪವಿದ್ದು, ಜೆಲ್ಲಿಯ ದಪ್ಪನ್ನು ಕ್ಯೂಬಿಕ್ ಮೀಟರ್ ನಲ್ಲಿ ಉಲ್ಲೇಖಿಸದೆ ಇರುವುದರಿಂದ ಫಲಿತಾಂಶ

ಸರಿಯಾಗಿ ಬಂದಿಲ್ಲವೆಂದು ತಿಳಿಸುವ ಸಾಕ್ಷ್ಯಾಧರಗಳನ್ನು ಆ.ಸ.ನೌಕರರು ಹಾಜರುಪಡಿಸಿಲ್ಲ.

**39.** 1ನೇ ಎದರುದಾರರು ತಾನು ಕಾಮಗಾರಿಯ ಸಂದರ್ಭದಲ್ಲಿ ಅಭಿಯಂತರರಾಗಿ ಬಾಲ್ಕಿ ತಾಲ್ಲೂಕಿನಲ್ಲಿ ಕೆಲಸ ನಿರ್ವಹಿಸಿರಲಿಲ್ಲ ಎಂದು ಪ್ರತಿಪಾದಿಸಿದ್ದು ಈ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ.

**40.** ಆದ್ದರಿಂದ ಒಟ್ಟಾರೆ ಮಂಡನಾಧಿಕಾರಿಗಳು 1 ರಿಂದ 3 ಮತ್ತು 5ನೇ ಆ.ಸ.ನೌಕರರ ಮೇಲೆ ಮಾಡಲಾದ ಆರೋಪಗಳನ್ನು ಸಾಬೀತುಪಡಿದ್ದಾರೆ.

41. ಸಕ್ಷಮ ಪ್ರಾಧಿಕಾರ ಮೇಲೆ ಹೇಳಿದ ದೋಷಾರೋಪಣಾ ಪಟ್ಟಿಯ ಕ್ರಮ ಸಂಖ್ಯೆ: 1, 2, 3 ಮತ್ತು 5ರಲ್ಲಿ ಮಾಡಿರುವ ಆಪಾಧನೆಗಳನ್ನು ಸಾಬೀತು ಪಡಿಸಿದೆ. ಆದ್ದರಿಂದ ನಾನು ಈ ಕೆಳಕಂಡಂತೆ ದಾಖಲಿಸಿದ್ದೇನೆ.

## FINDINGS

42. 1 ರಿಂದ 3 ಮತ್ತು 5ನೇ ಆ.ಸ.ನೌಕರರ ವಿರುದ್ಧ ಆರೋಪಗಳು ಸಾಬೀತು ಪಡಿಸಿದೆ. ಆದ್ದರಿಂದ ಮುಂದಿನ ಕ್ರಮಕ್ಕಾಗಿ ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರವರಿಗೆ ಸಲ್ಲಿಸಲಾಗಿದೆ.

43. 1ನೇ ಆ.ಸ.ನೌಕರರ ನಿವೃತ್ತಿ ದಿ: 31.3.2018, 2ನೇ ಆ.ಸ.ನೌಕರರ ನಿವೃತ್ತಿ ದಿ:24.10.2021, 3ನೇ ಆ.ಸ.ನೌಕರರ ನಿವೃತ್ತಿ ದಿ:30.6.2019 ಮತ್ತು 5ನೇ ಆ.ಸ.ನೌಕರರ ನಿವೃತ್ತಿ ದಿ: 31.7.2022

30/5

(ಗೋಪಾಲಪ್ಪ.ಎಸ್)
ಅಪರ ನಿಬಂಧಕರು ವಿಚಾರಣೆಗಳು-9
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು

**i) <u>List of witnesses examined on behalf of Disciplinary Authority.</u>**

| | |
|---|---|
| PW.1 | Sri.B.Prasanna Kumar, S/o N.R.Bandegowda, the then Assistant Engineer, TAC, Karnataka Lokayukta, Bengaluru Original |

**ii) <u>List of Documents marked on behalf of Disciplinary Authority.</u>**

| | |
|---|---|
| Ex.P1 | Ex.P-1 is the spot mahazar dated: 1.11.2012 |
| Ex.P 2 | Ex.P-2 is CD |
| Ex.p-3 | Ex.P-3 is statement showing improvements to Aurad- Sadhashivgad Road (SH.34) from KM. 35.60 to 39.60 and– KM 41.60 to 42.00 in selected reaches of Bhalki Taluq (package-I) |
| Ex.P-4 | Ex.P-4 is statement showing improvements to Aurad- Sadhashivgad Road (SH.34) from KM. 21.20 to 25.60 & KM 35.60 to 48.00 in selected reaches of Bhalki Taluq (package-II) |
| Ex.P-5 | Ex.P-5 is statement showing list of officers responsible for the deficit amount |
| Ex.P-6 | Ex.P-6 is the investigation report dated: 25.10.2013 |
| Ex.P 7 | Ex.P-7 is the brief note of Assistant Executive Engineer PWP and IWTD sub division Bhalki |
| Ex.P-8 | Ex.P-8 is the brief note of Assistant Executive Engineer PWP and IWTD sub division Bhalki |

**iii) <u>List of witnesses examined on behalf of DGO</u>**

| | |
|---|---|
| DW-1 | NIL |

**iv) <u>List of documents marked on behalf of DGO</u>**

| | |
|---|---|
| Ex.D-1 | NIL |

Sd/- 30/5
(ಗೋಪಾಲಪ್ಪ.ಎಸ್)
ಅಪರ ನಿಬಂಧಕರು ವಿಚಾರಣೆಗಳು-9
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು

**GOVERNMENT OF KARNATAKA**

**KARNATAKA LOKAYUKTA**

No.UPLOK-1/DE/677/2016/ARE-9

Multi Storied Building,
Dr. B.R. Ambedkar Veedhi,
Bengaluru-560001
Date: 08th June, 2022.

# RECOMMENDATION

Sub: Departmental Inquiry against Sriyuths:

(1) Guragunte Shivashankarappa, the then Executive Engineer, PWD Division, Bidar District (presently working as Superintending Engineer, PRE Circle, Kalaburgi);

(2) Mandoli Manohara Shankarappa, Executive Engineer, PWD, Bidar (presently working at Minor Irrigation Division);

(3) Mallikarjuna Karanje, the then Assistant Executive Engineer, KHB, Adalitha Bhavan, Bagalkot (presently working at Rural Drinking Water and Sanitation Sub-Division, Aurad, Bidar District);

(4) Ammanna Shankar, the then Assistant Executive Engineer, PWD Division, Bidar (Now retired Executive Engineer); and

(5) Syed Kutbuddin Khadri, the then Assistant Engineer, PWD Sub-Division, Bhalki (presently working at PRE Sub-Division, Bhalki, Bidar District)-reg.,

Ref: 1) Government Order No.ಲೋಇ 278 ಸೇಇವಿ 2016, Bengaluru, dated: 24/10/2016.

2) Nomination Order No.UPLOK-1/DE/677/ 2016, Bengaluru, dated: 30/11/2016 of Upalokayukta, State of Karnataka, Bengaluru.

3) Inquiry Report dated: 30/05/2022 of Additional Registrar of Enquiries-9, Karnataka Lokayukta, Bengaluru.

*****

The Government by its order dated: 24/10/2016 initiated the disciplinary proceedings against (1) Guraguntc Shivashankarappa, the then Executive Engineer, PWD Division, Bidar District (presently working as Superintending Engineer, PRE Circle, Kalaburgi); (2) Mandoli Manohara Shankarappa, Executive Engineer, PWD, Bidar (presently working at Minor Irrigation Division); (3) Mallikarjuna Karanje, the then Assistant Executive Engineer, KHB, Adalitha Bhavan, Bagalkot (presently working at Rural Drinking Water and Sanitation Sub-Division, Aurad, Bidar District); (4) Ammanna Shankar, the then Assistant Executive Engineer, PWD Division, Bidar (Now retired Executive Engineer); and (5) Syed Kutbuddin Khadri, the then Assistant Engineer, PWD Sub-Division, Bhalki (presently working at PRE Sub-Division, Bhalki, Bidar District) (hereinafter referred to as Delinquent Government Officials, for short as DGOs No.1 to 5) and entrusted the Departmental Inquiry to this Institution.

2. This Institution by Nomination Order No.UPLOK-1/DE/677/2016, Bengaluru, dated: 30/11/2016 nominated Additional Registrar of Enquiries-9, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGOs No.1 to 5 for the alleged charge of misconduct, said to have been committed by them.

3. The DGO No.1, Guragunte Shivashankarappa, the then Executive Engineer, PWD Division, Bidar District (presently working as Superintending Engineer, PRE Circle, Kalaburgi); DGO No.2, Mandoli Manohara Shankarappa, Executive Engineer, PWD, Bidar (presently working at Minor Irrigation Division); DGO No.3, Mallikarjuna Karanje, the then Assistant Executive Engineer, KHB, Adalitha Bhavan, Bagalkot (presently working at Rural Drinking Water and Sanitation Sub-Division, Aurad, Bidar District); DGO No.4, Ammanna Shankar, the then Assistant Executive Engineer, PWD Division, Bidar (Now retired Executive Engineer); and DGO No.5, Syed Kutbuddin Khadri, the then Assistant Engineer, PWD Sub-Division, Bhalki (presently working at PRE Sub-Division, Bhalki, Bidar District), were tried for the following charges:

**ANNEXURE-I**

**CHARGE :**

While you DGOs (1) Sri. Guragunte Shivashankarappa, the then Executive Engineer, PWD, Division, Bidar District (Presently working as Superintending Engineer PRE Circle, Kalaburgi) there was a Improvements to Aurad-Sadashivagad (SH-34) road from K.M. 35.60 to 39.60 and 41.60 to 42.00 KM in Bhalki Taluk- the total amount of deficiency found in bitumen binder content

deficiency of work and caused financial loss of Rs. 59,509/-.

(2) Sri. Mandoli Manohar Shankarappa, Executive Engineer, PWD Bidar (Presently working at Minor Irrigation Division, Bidar there was a Improvements to Aurad-Sadashivagad (SH-34) road from K.M. 35.60 to 39.60 and 41.60 to 42.00 KM in Bhalki Taluk- the total amount of deficiency found in bitumen binder content deficiency of work and caused financial loss of Rs. 1,02,904/-.

(3) Sri. Mallikarjuna Karanje, the then Assistant Executive Engineer, KHB, Adalitha Bhavan, Bagalkote (Presently working at Rural Drinking Water and Sanitation Sub-Division, Aurad, Bidar District there was a Improvements to Aurad-Sadashivagad (SH-34) road from K.M. 35.60 to 39.60 and 41.60 to 42.00 KM in Bhalki Taluk- the total amount of deficiency found in bitumen binder content deficiency of work and caused financial loss of Rs. 89,862/-

(4) DGO No. 4 Sri. Ammanna Shankar,the then AEE PWD Division, Bidar ................ and

(5) Sri. Syed Kutbuddin Khadri, the then Assistant Executive Engineer, PWD Sub-Division, Bhalki (Presently working at PRE sub-Division, Bhalki, Bidar District) there was a repair to Aurad-Sadashivagad (SH-34) road from K.M. 21.202 to 21.60 kms and 35.60 to 48.00 kms in Bhalki Taluk- the total amount of deficiency found in bitumen binder content deficiency of work and caused financial loss of Rs. 2,44,220/-

and therefore you DGOs No.1 to 5 have failed to maintain absolute integrity and devotion to duty and committed an act which is unbecoming of a Government Servants and therefore you are guilty of misconduct under Rule 3(1)(i) to (iii) of KCS (Conduct) Rules 1966".

4. The Inquiry Officer (Additional Registrar of Enquiries-9) on proper appreciation of oral and documentary evidence has held that, the Disciplinary Authority has 'Proved' the charges leveled against DGO No.1, Guragunte Shivashankarappa, the then Executive Engineer, PWD Division, Bidar District (presently working as Superintending Engineer, PRE Circle, Kalaburgi); DGO No.2, Mandoli Manohara Shankarappa, Executive Engineer, PWD, Bidar (presently working at Minor Irrigation Division); DGO No.3, Mallikarjuna Karanje, the then Assistant Executive Engineer, KHB, Adalitha Bhavan, Bagalkot (presently working at Rural Drinking Water and Sanitation Sub-Division, Aurad, Bidar District); DGO No.5, Syed Kutbuddin Khadri, the then Assistant Engineer, PWD Sub-Division, Bhalki (presently working at PRE Sub-Division, Bhalki, Bidar District).

5. On perusal of the Inquiry Report, in order to prove the guilt of the DGO, the Disciplinary Authority has examined one witness i.e., PW-1 and Ex. P-1 to P-9 documents were marked.

6. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of the Inquiry Officer.

7. As per the First Oral Statement of DGOs No.1 to 5 furnished by the Inquiry Officer, DGO No.1, Shri Guragunte Shivashankarappa, has retired from service on 31/03/2018; DGO No.2, Shri Mandoli Manohar Shankarappa, has retired from service on 31/10/2021, DGO No.3, Sri. Mallikarjuna Karanje, has retired from service on 30/06/2019; DGO No.4, Shri Ammanna Shankar, has retired from service on 31/8/2016, and DGO No.5, Sri. Syed Kutbuddin Khadri is due to retire from service on 31/07/2022.

8. Having regard to the nature of charge 'Proved' against DGO No.1, Guragunte Shivashankarappa, the then Executive Engineer, PWD Division, Bidar District (presently working as Superintending Engineer, PRE Circle, Kalaburgi); DGO No.2, Mandoli Manohara Shankarappa, Executive Engineer, PWD, Bidar (presently working at Minor Irrigation Division); DGO No.3, Mallikarjuna Karanje, the then Assistant Executive Engineer, KHB, Adalitha Bhavan, Bagalkot (presently working at

Rural Drinking Water and Sanitation Sub-Division, Aurad, Bidar District); DGO No.5, Syed Kutbuddin Khadri, the then Assistant Engineer, PWD Sub-Division, Bhalki (presently working at PRE Sub-Division, Bhalki, Bidar District) and on consideration of the totality of circumstances:-

i. "It is hereby recommended to the Government to impose penalty of 'withholding 10% of pension payable to DGO No.1, Shri Guragunte Shivashankarappa, for a period of three years and also to recover an amount of Rs.59,509/- from him".

ii. "It is hereby recommended to the Government to impose penalty of 'withholding 10% of pension payable to DGO No.2, Shri Mandoli Manohar Shankarappa, for a period of three years and also to recover an amount of Rs.1,02,904/- from him".

iii. "It is hereby recommended to the Government to impose penalty of 'withholding 10% of pension payable to DGO No.3, Shri Mallikarjuna Karanje, for a period of three years and also recover an amount of Rs. 89,862/- from him" and

iv. "It is hereby recommended to the Government to impose penalty of 'withholding 10% of pension

payable to DGO No.5, Shri Syed Kutbuddin Khadri for a period of three years and also recover an amount of Rs.2,44,220/- from him".

9. Action taken in the matter shall be intimated to this Authority.

Connected records are enclosed herewith.

08/08/22

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.